17 ಅಕ್ಟೋಬರ್ 2025 ಶುಕ್ರವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 217 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಭಾರತ ಟಿ-20 ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಹಾಗು ಮಹಿಳಾ ತಂಡದ ಸ್ಮೃತಿ ಮಂದಾನ ಅವರಿಗೆ ಐಸಿಸಿ ತಿಂಗಳ ಆಟಗಾರ ಗೌರವ ಒಲಿದಿದೆ.




ಈ ವಾರ ಚಿತ್ರಮಂದಿರಗಳಲ್ಲಿ ಏನು ವೀಕ್ಷಿಸಬೇಕು » 2



ಶಿಕ್ಷಕರ ನೈತಿಕತೆ, ಬದುಕಿನ ಮೌಲ್ಯಗಳಿಂದ ದೇಶದ ಅಭಿವೃದ್ಧಿ » 3



ಭಕ್ತರ ದರ್ಶನಕ್ಕೆ ಅವಕಾಶ ಕಲ್ಪಿಸಲು ಹರಸಾಹಸ » 4


# ಆರ್‌ಎಸ್‌ಎಸ್‌ಗೆ ಅಂಕುಶ ಹಾಕಿದ ಸರ್ಕಾರ

## ಸರ್ಕಾರಿ ಸ್ಥಳಗಳಲ್ಲಿ ಚಟುವಟಿಕೆಗೆ ಪೂರ್ವಾನುಮತಿ ಕಡ್ಡಾಯ | ಸಂಪುಟ ಸಭೆಯಲ್ಲಿ ತೀರ್ಮಾನ

• ಪ್ರಜೋದಯ ವರದಿ

**ಬೆಂಗಳೂರು:** ಸರ್ಕಾರಿ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ನಿರ್ಬಂಧ ಹಾಕುವಂತೆ ಸಚಿವ ಪ್ರಿಯಾಂಕ್ ಖರ್ಗೆ ಬರೆದಿದ್ದ ಪತ್ರಕ್ಕೆ ಸರ್ಕಾರ ಸ್ಪಂದಿಸಿದೆ. ಖಾಸಗಿ ಸಂಘ-ಸಂಸ್ಥೆಗಳು, ಸಂಘಟನೆಗಳು ಸಾರ್ವಜನಿಕ ಸ್ಥಳಗಳಲ್ಲಿ ಚಟುವಟಿಕೆಗಳನ್ನು ಕಾನೂನು ಬದ್ಧವಾಗಿ ನಡೆಸಲು ಪೂರ್ವಾನುಮತಿ ಕಡ್ಡಾಯಗೊಳಿಸಿ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ಗುರುವಾರ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಹೆಚ್.ಕೆ.ಪಾಟೀಲ್ ಅವರು, ಖಾಸಗಿ ಸಂಘ-ಸಂಸ್ಥೆಗಳು, ಸಂಘಟನೆಗಳು ಸಾರ್ವಜನಿಕ ಸ್ಥಳಗಳಲ್ಲಿ ಚಟುವಟಿಕೆಗಳನ್ನು ಕಾನೂನು ಬದ್ಧವಾಗಿ ನಡೆಸಲು ಅನುಮತಿ ನೀಡಲು ಅನುಮೋದನೆ ನೀಡಲಾಗಿದೆ. ಸಾರ್ವಜನಿಕ ಸ್ಥಳ, ಸರ್ಕಾರಿ ಶಾಲೆಗಳ ಮೈದಾನ ಬಳಕೆ ಸಂಬಂಧ ಸದ್ಬಳಕೆ ಮಾಡುವ ಸಂಬಂಧ ನಿಯಮ ರೂಪಿಸಲು ಸಚಿವ ಸಂಪುಟ ಮಾಡಲು ತೀರ್ಮಾನ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಈ ಬಗ್ಗೆ ವಿಸ್ತೃತವಾಗಿ ಜಿಒ ಹೊರಡಿಸಲಾಗುವುದು. ಈ ಮುಂಚೆ ಈ ಸಂಬಂಧ ಕಾನೂನಿನಲ್ಲಿ ಗೊಂದಲ ಇತ್ತು. ಈ ಬಗ್ಗೆ ಸ್ಪಷ್ಟತೆ ಕೊಡಲು, ಕೆಲ ನಿಯಮಗಳನ್ನು ಸೇರ್ಪಡಿಸಿ ನೀತಿ ನಿಯಮ ರೂಪಿಸಲಾಗುವುದು. ಒತ್ತಡದಿಂದ, ಅತಿಕ್ರಮ ಪ್ರವೇಶ ಮಾಡುವುದನ್ನು ತಡೆಯಲು ಈ



ತೀರ್ಮಾನ ಕೈಗೊಳ್ಳಲಾಗಿದೆ ಎಂದರು.

ಆರ್‌ಎಸ್‌ಎಸ್ ಚಟುವಟಿಕೆಗೆ ಸರ್ಕಾರಿ ಶಾಲಾ ಆವರಣದಲ್ಲಿ ಮೂಗುದಾರ ಹಾಕುವ ನಿಟ್ಟಿನಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು. ಈ ಹಿನ್ನಲೆ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲು ಸಿದ್ದರಾಮಯ್ಯ ಸೂಚನೆ ನೀಡಿದ್ದರು. ಇದೇ ವಿಚಾರವಾಗಿ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಯಿತು. ಕೇರಳ ಮತ್ತು ತಮಿಳುನಾಡಿನಲ್ಲಿ ಸರ್ಕಾರ ಈ ನಿಟ್ಟಿನಲ್ಲಿ ಕ್ರಮ ಕೈಗೊಂಡಿದೆ. ಅದೇ ಮಾದರಿಯನ್ನು ಕರ್ನಾಟಕದಲ್ಲಿ ಅಳವಡಿಸುವ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಿ, ತೀರ್ಮಾನ ಕೈಗೊಳ್ಳಲಾಗಿದೆ.

**ಹೊಸ ನಿಯಮ ಜಾರಿ**

ಸಂಪುಟ ಸಭೆ ಬಳಿಕ ಪ್ರತಿಕ್ರಿಯಿಸಿದ ಸಚಿವ ಪ್ರಿಯಾಂಕ್ ಖರ್ಗೆ, ಸರ್ಕಾರಿ ಸ್ಥಳಗಳಲ್ಲಿ ಖಾಸಗಿ ಕಾರ್ಯಕ್ರಮಗಳನ್ನು ಮಾಡಲು ಅನುಮತಿ ಪಡೆಯಬೇಕು. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆಯಾಗಿದೆ. ಯಾವುದೇ ಸಂಘಟನೆಗಳು, ಧರ್ಮದವರು ಅನುಮತಿ ಪಡೆಯಲೇಬೇಕು. ಈ ಸಂಬಂಧ ಸಂಬಂಧ ಹೊಸ ನಿಯಮಗಳನ್ನು ಕಾನೂನಾತ್ಮಕವಾಗಿ ಜಾರಿ ತರಲಾಗುವುದು. ಕಾನೂನು ನಮಗೂ, ನಿಮಗೂ, ಎಲ್ಲರಿಗೂ ಒಂದೇ. ಅನುಮತಿ ಪಡೆದು ಕಾರ್ಯಕ್ರಮ ಮಾಡಲು ಏನು ತೊಂದರೆ. ಯಾವುದೇ ತೊಂದರೆ ಆಗುವುದಿಲ್ಲವೆಂದರೆ ಕಾರ್ಯಕ್ರಮಕ್ಕೆ ಪೊಲೀಸರು ಅನುಮತಿ ಕೊಡುತ್ತಾರೆ ಎಂದರು.

ಶಾಲೆ, ಸರ್ಕಾರಿ ಜಾಗ, ಅನುದಾನಿತ ಶಿಕ್ಷಣ ಸಂಸ್ಥೆಗಳು ಯಾವುದೇ ಚಟುವಟಿಕೆಗೆ ಅವಕಾಶ ಇಲ್ಲ. ಹಿಂದೆ ಕೆಲವು ಆದೇಶಗಳನ್ನ ಕ್ರೂಢೀಕರಿಸಿ ಹೊಸ ಕಾನೂನು ಜಾರಿಗೆ ತರುತ್ತೇವೆ. ಸಂಘ ಸಂಸ್ಥೆಗಳ ನಿಯಂತ್ರಣ ಮಾಡುವುದು ಸಾಧ್ಯವಿಲ್ಲ, ಆದರೆ ಸರ್ಕಾರದ ಜಾಗದಲ್ಲಿ ಕಾರ್ಯಕ್ರಮ ಮಾಡಲು ಸಾಧ್ಯವಿಲ್ಲ. ಅನುಮತಿ ಪಡೆದು ಕಾರ್ಯಕ್ರಮ ಮಾಡಬೇಕು. ಲಾಠಿ ಬೀಸುವುದು, ಪಥ ಸಂಚಲನ ಹೋಗುವುದು ಸಾಧ್ಯವಿಲ್ಲ ಎಂದು ಹೇಳಿದರು.

### ಸಿಎಂಗೆ ಮತ್ತೊಂದು ಪತ್ರ

ಸಚಿವ ಪ್ರಿಯಾಂಕ್ ಖರ್ಗೆ ಅವರು ಸಿದ್ದರಾಮಯ್ಯಗೆ ಮತ್ತೊಂದು ಪತ್ರ ಬರೆದಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಕಾರ್ಯಕ್ರಮಗಳಲ್ಲಿ ಸರ್ಕಾರಿ ಅಧಿಕಾರಿಗಳು ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ಮಾತನಾ ಡುತ್ತಾರೆ. ಅಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಅವರು ಪತ್ರ ಬರೆದಿದ್ದರು. ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡವಳಿಕೆ) ನಿಯಮಗಳು, 2021 ಅನ್ನು ಜಾರಿಗೆ ತರಬೇಕೆಂದು ಖರ್ಗೆ ಒತ್ತಾಯಿಸಿದ್ದಾರೆ.

### ತಮಿಳುನಾಡು ಮಾದರಿಯಲ್ಲೇ ಕ್ರಮ

2013ರ ಬಿಜೆಪಿ ಸರ್ಕಾರದ ಆದೇಶವನ್ನೇ ಮುಂದಿಟ್ಟು ಸಿದ್ದರಾಮಯ್ಯ ಸರ್ಕಾರ, ತಮಿಳುನಾಡು ಸರ್ಕಾರ ಕೈಗೊಂಡಿ ರುವ ನಿರ್ಧಾರದಂತೆ ಖಾಸಗಿ ಸಂಸ್ಥೆಗಳು, ಸಂಘಟನೆಗಳು ಚಟುವಟಿಕೆಗಳನ್ನ ನಡೆಸಲು ಪೂರ್ವಾನುಮತಿ ಕಡ್ಡಾಯ ಮಾಡಿ ಹೊಸ ನಿಯಮ ತರಲು ಮುಂದಾಗಿದೆ. ತನ್ನ ತೀರ್ಮಾನದಲ್ಲಿ ಎಲ್ಲಿಯೂ ಆರ್‌ಎಸ್‌ಎಸ್ ಪದ ಬಳಕೆ ಮಾಡದೇ ಸರ್ಕಾರ ಖಾಸಗಿ ಸಂಸ್ಥೆಗಳು ಎಂದು ಉಲ್ಲೇಖಿಸಿ ಜಾಣ್ಮೆ ನಡೆ ಅನುಸರಿಸಿದೆ. ಈ ನಿಯಮ ಜಾರಿಯಾದರೆ ಆರ್‌ಎಸ್‌ಎಸ್ ಮಾತ್ರವಲ್ಲ ಖಾಸಗಿ ಸಂಘ, ಸಂಸ್ಥೆಗಳು, ಸಂಘಟನೆಗಳು ಸರ್ಕಾರಿ ಸ್ಥಳಗಳಲ್ಲಿ ಚಟುವಟಿಕೆಗಳನ್ನು ನಡೆಸುವುದಕ್ಕೆ ಕಡಿವಾಣ ಬೀಳಲಿದೆ. ಯಾರೇ ಯಾವುದೇ ಕಾರ್ಯಕ್ರಮ ಮಾಡುವುದಾದರೂ ಅನುಮತಿ ಪಡೆಯಬೇಕಾಗುತ್ತದೆ.

## ತಾಯಿ ಮುಂದೆ ಎಲ್ಲರೂ ಒಂದೇ | ವಿಶೇಷ ಆತಿಥ್ಯ ನಿರಾಕರಣೆ

# ಭಕ್ತರೊಂದಿಗೆ ದೇವಿ ದರ್ಶನ ಪಡೆದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್

• ಪ್ರಜೋದಯ ವರದಿ

**ಹಾಸನ:** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಗುರುವಾರ ಸಾವಿರ ರೂ. ಟಿಕೆಟ್ ಖರೀದಿಸಿ ಭಕ್ತರೊಂದಿಗೆ ಸರದಿ ಸಾಲಿನಲ್ಲಿ ಬಂದು ದೇವಿ ದರ್ಶನ ಪಡೆದರು.

ರಾತ್ರಿ 8 ಗಂಟೆಗೆ ನಗರಕ್ಕೆ ಆಗಮಿಸಿದ ಅವರು ಕುಟುಂಬಸ್ಥರು ಹಾಗು ಆಪ್ತ ಸಹಾಯಕರಿಗೆ ಸಾವಿರ ರೂ. ಟಿಕೆಟ್ ಖರೀದಿಸಿ ಸರದಿ ಸಾಲಿನಲ್ಲಿ ಹೆಜ್ಜೆ ಹಾಕಿದರು. ಈ ವೇಳೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಅವರು ಸರದಿ ಸಾಲಿನಲ್ಲೇ ಬ್ಯಾರಿಕೇಡ್ ತೆರೆದು ದಾರಿ ಮಾಡಿ ಕೊಡುವುದಾಗಿ ಹೇಳಿದರಾದರೂ, ಹಾಸನಾಂಬ ತಾಯಿ ಮುಂದೆ ಎಲ್ಲರೂ ಒಂದೇ. ಜನರೊಂದಿಗೆ ಹೋಗುತ್ತೇನೆಂದು ಸಾಗಿದರು. ಅರ್ಧ ದಾರಿ ಕ್ರಮಿಸಿದ ಮೇಲೆ ಜನದಟ್ಟಣೆ ಹೆಚ್ಚಾಗಿ ಸಚಿವರು ನಿಂತಿದ್ದ ಸಾಲು ಮುಂದೆ ಸಾಗದೆ ನಿಲ್ಲ ಬೇಕಾಯಿತು. ಈ ವೇಳೆ ಜನರನ್ನು ಪಕ್ಕಕ್ಕೆ ಸರಿಸಲು ಪೊಲೀಸರು ಮುಂದಾ ದಾಗ ಸಾರ್ವಜನಿಕರು ಆಕ್ಷೇಪ ವ್ಯಕ್ತ ಪಡಿಸಿದ್ದರಿಂದ ಮುಂದೆ ಹೋಗಲು ಸಾಧ್ಯವಾಗಲಿಲ್ಲ. ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ಸಚಿವರು ಜನರೊಂದಿಗೆ ಹೆಜ್ಜೆ ಹಾಕಿದರು. ಹಾಸನಾಂಬ ಹಾಗು ಸಿದ್ದೇಶ್ವರಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು.

**ಶಕ್ತಿ ಯೋಜನೆ ಸಾರ್ಥಕತೆ**

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು, ಶಕ್ತಿ ಯೋಜನೆಯಿಂದ ರಾಜ್ಯದ ವಿವಿಧ ಮೂಲೆಗಳಿಂದ ಹಾಸನಾಂಬ ದರ್ಶನಕ್ಕೆ ಮಹಿಳಾ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಶಕ್ತಿ ಯೋಜನೆ ಜಾರಿಗೊಳಿಸಿದ್ದು ಸಾರ್ಥಕವಾಗಿದೆ ಯೆಂದರು. » ನಾಲ್ಕನೇ ಪುಟದಲ್ಲಿ



### ಅಮ್ಮನ ಶಕ್ತಿ ಅಪಾರವೆಂದ ಸಚಿವೆ

ಹಾಸನಾಂಬ ದರ್ಶನ ಬಳಿಕ ಮುಖ್ಯ ದ್ವಾರದ ವರೆಗೆ ಸಚಿವರು ಬರಿಗಾಲಲ್ಲಿ ನಡೆದು ಬಂದರು. ಬರಿಗಾಲಿನಲ್ಲಿ ಹತ್ತು ಹೆಜ್ಜೆ ಸಹ ನಡೆಯಲು ಆಗುವುದಿಲ್ಲ. ಹಾಸನಾಂಬ ಅಮ್ಮನ ಶಕ್ತಿ ಅಪಾರ. ಆದ್ದರಿಂದಲೇ ಇಷ್ಟು ದೂರ ನಡೆಯುವ ಶಕ್ತಿ ಬಂದಿದೆ. ಈ ವರ್ಷ ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಎಲ್ಲಾ ಅಧಿಕಾರಿಗಳು ಮುತುವರ್ಜಿ ವಹಿಸಿ ಕೆಲಸ ಮಾಡುತ್ತಿದ್ದೀರಿ ಎಂದು ಜಿಲ್ಲಾಧಿಕಾರಿ ಹಾಗು ಪೊಲೀಸ್ ವರಿಷ್ಟಾಧಿಕಾರಿಗೆ ಬಹುಪರಾಕ್ ಹೇಳಿದರು.

## ಆರ್‌ಎಸ್‌ಎಸ್ ಬಗ್ಗೆ ಪೂರ್ವಾಗ್ರಹ ಮನೋಭಾವ ಬೇಡ

• ಪ್ರಜೋದಯ ವರದಿ



**ಹಾಸನ:** ರಾಷ್ಟ್ರದ ಏಕತೆಗಾಗಿ ನಿರಂತರ ಶ್ರಮಿಸುತ್ತಿರುವ ಆರ್‌ಎಸ್‌ಎಸ್ ಕುರಿತು ಪೂರ್ವಾಗ್ರಹ ಪೀಡಿತರಾಗಬಾರದು. ಒಂದು ವೇಳೆ ರಾಜ್ಯದಲ್ಲಿ ಆರ್‌ಎಸ್‌ಎಸ್ ನಿಷೇಧಿಸಲು ಮುಂದಾದರೆ ಅದರ ಪರಿಣಾಮ ಎದುರಿಸಬೇಕಾಗುತ್ತದೆಂದು ವಿಶ್ವ ಹಿಂದೂ ಪರಿಷತ್ ಪ್ರಾಂತೀಯ ಸಂಯೋಜಕ ಶರಣ್ ಪಂಪ್‌ವೆಲ್ ಅವರು ಎಚ್ಚರಿಕೆ ನೀಡಿದರು.

ಹಾಸನಾಂಬ ದರ್ಶನದ ಬಳಿಕ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆರ್‌ಎಸ್‌ಎಸ್‌ಗೆ 100 ವರ್ಷ ತುಂಬಿದ ಹಿನ್ನಲೆಯಲ್ಲಿ ದೇಶಾದ್ಯಂತ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಅಮೇರಿಕಾದಂತಹ ದೇಶ ನಮ್ಮ ಮೇಲೆ ಸುಂಕ ಹೇರುತ್ತಿರುವ ಸಂದರ್ಭದಲ್ಲಿ ಸ್ವದೇಶಿ ವಸ್ತು ಬಳಕೆಗೆ ಕರೆ ಕೊಟ್ಟಿದ್ದು ಆರ್‌ಎಸ್‌ಎಸ್. ಜಾತಿಯ ಕಾರಣಕ್ಕೆ ಅನೇಕ ಸಮಸ್ಯೆಗಳು ದೇಶದಲ್ಲಿ ತಲೆದೋರಿವೆ. ಇಂತಹ ಸಂದರ್ಭದಲ್ಲಿ ಸಮಾನತೆಯನ್ನು ಪ್ರತಿಪಾದಿಸುತ್ತಿರುವುದು ಆರ್‌ಎಸ್‌ಎಸ್. ಪರಿಸರ ಮಾಲಿನ್ಯದ ವಿರುದ್ಧ ಜಾಗೃತಿ ಮೂಡಿಸುವ, ಸಂಸ್ಕಾರ, ಮಾನವೀಯ ಮೌಲ್ಯಗಳನ್ನು ಪ್ರತಿ ಪಾದಿಸುವ ಸಂಘಟನೆಯನ್ನು ದೂಷಿಸುವುದು ಸರಿಯಲ್ಲ. ಆರ್‌ಎಸ್‌ಎಸ್ ದೇಶ ವಿಭಜನೆ ಮಾಡುತ್ತಿದೆಯೆಂಬ ಹೇಳಿಕೆಯೇ ಮೂರ್ಖತನದ್ದಾಗಿದೆ. ದೇಶ ಒಡೆಯುವುದೇ ಸಂಘದ ಉದ್ದೇಶವಾಗಿದ್ದರೆ ಲಕ್ಷಾಂತರ ಜನರು ಭಾಗವಹಿಸುತ್ತಿರುವುದು ಹೇಗೆ ಸಾಧ್ಯವೆಂದು ಪ್ರಶ್ನಿಸಿದರು. » ನಾಲ್ಕನೇ ಪುಟದಲ್ಲಿ

## ಮಾಜಿ ಸಚಿವ ಸಿ.ಟಿ.ರವಿ ತಿರುಗೇಟು | ಆರ್‌ಎಸ್‌ಎಸ್ ಶಾಖೆಗೆ ಆಹ್ವಾನ

# ಪ್ರಿಯಾಂಕ್ ಖರ್ಗೆ ಅಪಪ್ರಚಾರ ಮನಸ್ಥಿತಿ ಬದಲಿಸಿಕೊಳ್ಳಲಿ

• ಪ್ರಜೋದಯ ವರದಿ

**ಹಾಸನ:** ರಾಷ್ಟ್ರ ಭಕ್ತ ಸಂಘಟನೆ ವಿರುದ್ಧ ಅಪಪ್ರಚಾರ ಮಾಡುತ್ತಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರು ಯಾರಿಗೆ ಲಾಭ ಮಾಡಿಕೊಡಲು ಹೊರಟಿದ್ದಾರೆ. ತಮ್ಮ ಮನಸ್ಥಿತಿಯನ್ನು ಬದಲಾವಣೆ ಮಾಡಿಕೊಳ್ಳಬೇಕೆಂದು ಮಾಜಿ ಸಚಿವ ಸಿ.ಟಿ.ರವಿ ಅವರು ತಿರುಗೇಟು ನೀಡಿದರು.

ಗುರುವಾರ ಹಾಸನಾಂಬ ದೇವಿ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿಸ್ವಾರ್ಥ ಸೇವೆಗೆ ಹೆಸರಾಗಿರುವ ಆರ್‌ಎಸ್‌ಎಸ್, ಭಾರತವನ್ನು ವಿಶ್ವಗುರು ಮಾಡ ಬೇಕೆಂಬ ಹಂಬಲ ಇಟ್ಟುಕೊಂಡು ವ್ಯಕ್ತಿಗಳನ್ನು ನಿರ್ಮಾಣ ಮಾಡುತ್ತಿದೆ. ಜಾತಿ ವ್ಯವಸ್ಥೆಯನ್ನು ಅಳಿಸುವ ಬಗ್ಗೆ ಜಾಗೃತಿ ಮೂಡಿಸುವುದು ತಪ್ಪೇ ಎಂದು ಪ್ರಶ್ನಿಸಿದ ಅವರು, ಆರ್‌ಎಸ್‌ಎಸ್‌ಗೆ ಸದಸ್ಯತ್ವದ ಅಗತ್ಯವಿಲ್ಲ, ಶಾಖೆಗೆ ಬನ್ನಿ ಎಂದು ಆಹ್ವಾನ ನೀಡಿದರು.

ಸಚಿವರು ದೇಶದ್ರೋಹ, ಮತೀಯವಾದ ಹೇಳೋರನ್ನ, ಜಾತಿ ವಾದ ಮಾಡೋರನ್ನ ನಿಷೇಧ ಮಾಡಿ ಎಂದು ಹೇಳಬಹುದಿತ್ತು. ಆದರೆ, ಆರ್‌ಎಸ್‌ಎಸ್ ಕಾರ್ಯಚಟುವಟಿಕೆ ನಿಷೇಧಿಸಬೇಕೆಂದು ಹೇಳಿರುವ ಅವರ ಮಾತು ದೇಶ ದ್ರೋಹಿಗಳಿಗೆ, ಸಮಾಜಘಾತುಕರಿಗೆ ಲಾಭವಾಗುತ್ತದೆ. ಜಾತಿ, ಜಾತಿ ಎತ್ತಿಕಟ್ಟಿ ಸಮಾಜ ಒಡೆಯುವು ವ್ಯಕ್ತಿಗಳಿಗೆ ಅನುಕೂಲ ಮಾಡಿ ಕೊಟ್ಟಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

**ಮಾಹಿತಿ ನೀಡುವುದು ಕಡ್ಡಾಯವಲ್ಲ**

ರಾಜ್ಯಸಭೆ ಸದಸ್ಯೆ ಸುಧಾಮೂರ್ತಿ ಜಾತಿಗಣತಿ ನಿರಾಕರಿಸಿದ ವಿಚಾರಕ್ಕೆ ಪ್ರತಿಕ್ರಿಯಿಸಿ, ಮಾಹಿತಿ ನೀಡುವುದು ಕಡ್ಡಾಯವಲ್ಲವೆಂದು ನ್ಯಾಯಾಲಯ, ಹಿಂದುಳಿದ ಆಯೋಗವೂ ಹೇಳಿದೆ. ಜಾತಿಗಣತಿಗೆ ಮಾಹಿತಿ ಕೊಡಬೇಕಿರುವುದು ಕಡ್ಡಾಯವಲ್ಲ. ಜಾತಿಗಣತಿಯ ಉದ್ದೇಶ ವೇನು, ಜಾತ್ಯಾತೀತ ರಾಷ್ಟ್ರ ನಿರ್ಮಾಣವೇ? ಸಾಮಾಜಿಕ ನ್ಯಾಯವೇ ಉದ್ದೇಶವಾಗಿದ್ದರೆ ಆ ಉದ್ದೇಶವನ್ನು ಈಡೇರಿಸುವಂತಹ ಸಂಕಲ್ಪ ಶಕ್ತಿ ಕಾಂಗ್ರೆಸ್‌ಗೆ ಇಲ್ಲ. ನಾಗ್ ಮೋಹನ್‌ದಾಸ್, ಕಾಂತರಾಜು ವರದಿ ಕಸದಬುಟ್ಟಿ ಸೇರಿತು. ಮಂಡಲ್ ಆಯೋಗದ ವರದಿಯನ್ನು ಕುರ್ಚಿಯಡಿ ಹಾಕಿಕೊಂಡು ದಶಕಗಳ ಕಾಲ ಕಾಂಗ್ರೆಸ್ ಕೂತಿತ್ತು, ಇಚ್ಛಾಶಕ್ತಿ ಇಲ್ಲ ಎಂದು ಹೇಳಿದರು.

ಕೇವಲ ಜಾತಿ ಜಾತಿ ಎತ್ತಿಕಟ್ಟಲು, ಸಮಾಜ ಒಡೆಯಲು, ಜನರನ್ನು ಪ್ರಮುಖ ಸಮಸ್ಯೆಗಳಿಂದ ಬೇರೆ ಕಡೆಗೆ ವಿಷಯಾಂತರ ಮಾಡಲು ನೀವು ಸಾಂದರ್ಭಿಕವಾಗಿ ರಾಜಕೀಯ ಸಾಧನವಾಗಿ ಮಾಡಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್‌ಗೆ ಜಾತಿಯನ್ನು ಅಳಿಸಬೇಕೆಂದಿದ್ದರೆ, ಬಡತನ ನವೇ ಮಾನದಂಡ ಸಾಕಿತ್ತು. ಸಾಮಾಜಿಕ ಅಸ್ಪೃಶ್ಯತೆ ನಿವಾರಣೆ ಮಾಡಬೇಕು ಎಂದಿದ್ದರೆ ಸಾಮಾಜಿಕ ಪರಿವರ್ತನೆಯ ಶಿಕ್ಷಣ ಕೊಡುವ ಸಂಘಟನೆಗಳನ್ನು ನಿಷೇಧ » ನಾಲ್ಕನೇ ಪುಟದಲ್ಲಿ



### ಅವಕಾಶ ತಪ್ಪುವ ಆತಂಕದಲ್ಲಿ ಹೇಳಿಕೆ

ಬಿಜೆಪಿ ಸೇರ್ಪಡೆಗೆ ದೆಹಲಿಯಿಂದ ಕರೆ ಬಂದಿತ್ತು ಎಂಬ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿ, ಕರೆ ಬಂದಾಗಲೇ ಹೇಳಬೇಕಿತ್ತು. ಒಂದು ವೇಳೆ ಅವರಿಗೆ ಕರೆ ಬಂದಿದ್ದರೆ ಅದನ್ನು ಅವರು ನಿರಾಕರಿಸುತ್ತಿದ್ದರು ಎನ್ನುವುದನ್ನ ಒಪ್ಪಲು ಆಗುವುದಿಲ್ಲ. ಈಗ ಕಾಂಗ್ರೆಸ್ ಒಳಗೆ ಅವಕಾಶ ತಪ್ಪುವ ಆತಂಕದಿಂದ ಹೀಗೆ ಹೇಳುತ್ತಿರಬಹುದು. ರಾಜಕಾರಣಿಗಳ ಮಾತಿನಲ್ಲಿ ಎಲ್ಲಾ ಕಾಲದಲ್ಲಿ ಸತ್ಯ ಇರುತ್ತದೆಂದು ಭಾವಿಸಬಾರದು. ಕೆಲವೊಂದು ಬಾರಿ ತಮ್ಮ ಅನುಕೂಲಕ್ಕೆ ಸುಳ್ಳು ಹೇಳುತ್ತಾರೆ. ಡಿ.ಕೆ.ಶಿವಕುಮಾರ್ ಅವರು ಸುಳ್ಳು ಹೇಳಿದ್ದರೋ, ನಿಜ ಹೇಳುತ್ತಿದ್ದರೋ ಅವರಿಗೇ ಗೊತ್ತು ಎಂದರು.

## ಜಿಪಂ, ತಾಪಂ ಚುನಾವಣೆ ತಯಾರಿಗೆ ಹೆಚ್‌ಡಿಕೆ ಸಭೆ

### ಇಂದು ಜಿಲ್ಲೆಯ ಪ್ರಮುಖರೊಂದಿಗೆ ಚರ್ಚೆ: ಬೋಜೇಗೌಡ

• ಪ್ರಜೋದಯ ವರದಿ



**ಹಾಸನ:** ಮುಂಬರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ಎದುರಿಸಲು ಕೇಂದ್ರ ಸಚಿವ, ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಅವರು ಶುಕ್ರವಾರ ಹಾಸನದಲ್ಲಿ ಸಭೆ ನಡೆಸಲಿದ್ದಾರೆಂದು ವಿಧಾನ ಪರಿಷತ್ ಸದಸ್ಯ ಬೋಜೇಗೌಡ ಅವರು ತಿಳಿಸಿದರು.

ಗುರುವಾರ ಹಾಸನಾಂಬ ದೇವಿ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ಪಕ್ಷದ ಕೋರ್ ಕಮಿಟಿ ಸಭೆ ಕರೆದು ಬಹಳ ದಿನವಾಗಿತ್ತು. ದೆಹಲಿಯಲ್ಲಿ ಒಂದೆ ರಡು ಸಭೆ ಮಾಡಿದ್ದಾರೆ. ಗುರುವಾರ ಸಂಜೆ 4 ಗಂಟೆಗೆ ಸಭೆ ಕರೆದಿದ್ದು, ಆ ಸಭೆಯಲ್ಲಿ ಶಾಸಕರು, ವಿಧಾನ ಪರಿಷತ್ ಸದಸ್ಯರು, ಪಕ್ಷದ ಪ್ರಮುಖ ರನ್ನು ಆಹ್ವಾನಿಸಿದ್ದಾರೆ. ಇದಾದ ಬಳಿಕ ಶುಕ್ರ ವಾರ ಹೆಚ್.ಡಿ.ಕುಮಾರಸ್ವಾಮಿ ಅವರು ಹಾಸನಾಂಬ ದೇವಿ ದರ್ಶನಕ್ಕೆ ಬರುತ್ತಿದ್ದಾರೆ. ದರ್ಶನದ ಬಳಿಕ ಸಭೆ ನಡೆಸಲಿದ್ದು, ಜಿಲ್ಲೆಯ ಎಲ್ಲಾ ಪ್ರಮುಖರು ಹಾಗು ರಾಜ್ಯದ ಅನೇಕ ನಾಯಕರು ಭಾಗವಹಿ ಸುತ್ತಾರೆ. ಕೇಂದ್ರ ಸಚಿವರು ಎರಡ್ಮೂರು ದಿನ ರಾಜ್ಯದಲ್ಲೇ ಇರುತ್ತಾರೆ. ಶುಕ್ರವಾರ ಹಾಸನದಲ್ಲೇ ಉಳಿಯಲಿದ್ದಾರೆ ಎಂದು ಹೇಳಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವ ಸಂಬಂಧ ಸರ್ಕಾರ ನ್ಯಾಯಾಲಯದ ಮೇಲೆ ಬೊಟ್ಟು ಮಾಡುವುದನ್ನು ಸರ್ಕಾರ ಬಿಡಬೇಕು. ತಡೆಯಾಜ್ಞೆ ತೆರವುಗೊಳಿಸಲು ಸರ್ಕಾರ ಬಳಿ ಅಡ್ವಕೇಟ್ ಜನರಲ್ ಇಲ್ಲವೇ ಅಥವಾ ನ್ಯಾಯಾಲಯಕ್ಕೆ ಪ್ರಬಲವಾದ ಕಾರಣ ಕೊಡಲು ಸರ್ಕಾರಕ್ಕೆ ಯೋಗ್ಯತೆ ಇಲ್ಲವೇ ಎಂದು ಪ್ರಶ್ನಿಸಿ ಅವರು, ಸರ್ಕಾರ ಮೊದಲು ತಡೆ ಯಾಜ್ಞೆ ತೆರವುಗೊಳಿಸುವ ಕೆಲಸ ಮಾಡ ಬೇಕೆಂದು ಒತ್ತಾಯಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಮುಂದೂಡಲು ಇವರಿ ಗೇನು ಅಧಿಕಾರವಿದೆ? ತಡೆಯಾಜ್ಞೆ ಒಂದನ್ನೇ ಸರ್ಕಾರ ಅಸ್ತ್ರವಾಗಿ ಮಾಡಿಕೊಂಡು ಸ್ಥಳೀಯ ಸಂಸ್ಥೆ ಚುನಾವಣೆ ಮುಂದೂಡಿಕೊಂಡು ಹೋಗುತ್ತಿದೆ. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವ ಣೆಗೆ ಸ್ಪರ್ಧೆ ಮಾಡಲು ಎಲ್ಲಾ ಪಕ್ಷದವರು ಕಾಯು ತ್ತಿದ್ದಾರೆ. ನಿಗದಿತ ಸಮಯದಲ್ಲಿ ಚುನಾವಣೆ ಮಾಡಬೇಕು. ಆದರೆ, ಚುನಾವಣೆ ಮಾಡಬಾರ ದೆಂದು ಸರ್ಕಾರದ ತಲೆಯೊಳಗಿದೆ ಎಂದು ದೂರಿದರು.

ರಾಜ್ಯದ ಅವ್ಯವಸ್ಥೆಯನ್ನು ಐಟಿ ಕಂಪನಿಗಳಲ್ಲಾ ಟೀಕೆ ಮಾಡುವಂತಹ ಪರಿಸ್ಥಿತಿಗೆ ಬಂದಿದೆ. ಸರ್ಕಾರ ಎಲ್ಲರ ನಾಲಿಗೆಗೆ ಸಿಲುಕಿದ್ದಾರೆ, ಗುಂಡಿ ಗಳನ್ನು ಮುಚ್ಚುವ ಕೆಲಸ ಯಾರು ಮಾಡ ಬೇಕು. ಆಯಾ ಸರ್ಕಾರಗಳು, ಜನಪ್ರತಿನಿಧಿಗಳ ಜವಾ ಬ್ದಾರಿಯಲ್ಲವೇ ಎಂದು ಪ್ರಶ್ನಿಸಿದರು.

**ಜಿಲ್ಲಾಡಳಿತ ಉತ್ತಮ ವ್ಯವಸ್ಥೆ**

ಹಾಸನಾಂಬ ದೇವಿ ದರ್ಶನಕ್ಕೆ ಹಲವು ವರ್ಷಗಳಿಂದ ಬರುತ್ತಿದ್ದೇನೆ. ಜಿಲ್ಲಾಡಳಿತ ಉತ್ತಮ ವ್ಯವಸ್ಥೆ ಮಾಡಿದೆ. ಈ ಬಾರಿ ಜಿಲ್ಲಾ ಉಸ್ತುವಾರಿ ಸಚಿವರು ಹೇಳಿದ್ದಂತೆ ಹೆಚ್ಚು ಜನರನ್ನು ಕರೆದುಕೊಂಡು ಬಾರದೆ, ನಮ್ಮ ಕುಟುಂಬದವರು ಮಾತ್ರ ಬಂದಿದ್ದೇವೆ. ಶಿಷ್ಟಾಚಾರ ಪ್ರಕಾರ ದೇವರ ದರ್ಶನ ಮಾಡಿಸುತ್ತಿರುವುದು ಉತ್ತಮವಾಗಿದೆ. ಸಾರ್ವಜನಿಕರಿಗೆ ಸುಲಭವಾಗಿ ದರ್ಶನಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಹೇಳಿದರು.

# ಇಂದಿನಿಂದ ಲೈಫ್‌ಸ್ಟೈಲ್ ಎಕ್ಸ್‌ಪೋ-ಆಹಾರ ಮೇಳ

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ಹಾಗು ಸಿದ್ದೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ನಗರದ ಆದಿಚುಂಚನಗಿರಿ ಕಲ್ಯಾಣ ಮಂಟಪದಲ್ಲಿ ಶ್ರೀ ವಿ ಗ್ರೂಪ್ಸ್ ಹಾಗು ಪ್ರಜೋದಯ ದಿನಪತ್ರಿಕೆ ವತಿಯಿಂದ ಲೈಫ್‌ಸ್ಟೈಲ್ ಎಕ್ಸ್‌ಪೋ ಬೃಹತ್ ಶಾಪಿಂಗ್ ಮತ್ತು ಆಹಾರ ಮೇಳವನ್ನು ಅ.17 ರಿಂದ 19ರವರೆಗೆ ಆಯೋಜಿಸಲಾಗಿದೆ.

ಬೆಳಿಗ್ಗೆ 10 ರಿಂದ ರಾತ್ರಿ 9ರವರೆಗೆ ವಸ್ತು ಪ್ರದರ್ಶನ ಹಾಗು ಮಾರಾಟ ಮೇಳ ನಡೆಯಲಿದ್ದು ಪ್ರವೇಶ ಉಚಿತ. ಮೂರು ದಿನಗಳ ಎಕ್ಸ್‌ಪೋದಲ್ಲಿ ವಿಭಿನ್ನ ಬಗೆಯ ಉತ್ಪನ್ನಗಳು ಒಂದೇ ವೇದಿಕೆಯಲ್ಲಿ ದೊರೆಯಲಿವೆ. ಬೃಹತ್ ಶಾಪಿಂಗ್ ಮತ್ತು ಆಹಾರ ಮೇಳವೆಂಬ ಶೀರ್ಷಿಕೆಯಡಿ ಆಯೋಜನೆಯಾಗಿರುವ ಈ ಪ್ರದರ್ಶನದಲ್ಲಿ ಸೀರೆ, ಜುವೆಲರಿ, ರೆಡಿಮೇಡ್ ಬ್ಲೌಸ್, ಬೆಡ್ ಶೀಟ್, ಬಗೆ ಬಗೆಯ ಕುರ್ತಾಗಳು, ಗೃಹ ಅಲಂಕಾರಿಕ ಸಾಮಾಗ್ರಿಗಳು, ಹ್ಯಾಂಡ್ ಬ್ಯಾಗ್‌ಗಳು, ಹಸ್ತಕಲಾ ವಸ್ತುಗಳು, ಸ್ಥಳೀಯ ಉತ್ಪನ್ನಗಳು, ಗ್ರಾಮೀಣ ಉತ್ಸವದ ಆಹಾರ ಪದಾರ್ಥ ಗಳು ಮತ್ತು ಅನೇಕ ವಿಭಿನ್ನ ವಸ್ತುಗಳ ಪ್ರದರ್ಶನ ಹಾಗು ಮಾರಾಟ ಇರಲಿದೆ.

ಎಕ್ಸ್‌ಪೋಗೆ ಬರುವವರಿಗೆ ಸಾಂಸ್ಕೃತಿಕ ಮನರಂಜನೆ, ಫುಡ್ ಸ್ಟಾಲ್‌ಗಳು ಹಾಗು ಕುಟುಂಬ ಸಮೇತರಾಗಿ ಸಮಯ ಕಳೆಯಲು ವಿವಿಧ ಆಕರ್ಷಣೆಗಳ ವ್ಯವಸ್ಥೆ ಮಾಡಲಾಗಿದೆ. ಜನರು ಜಾತ್ರಾ ಉತ್ಸವದ ಖುಷಿಯೊಂದಿಗೆ ಶಾಪಿಂಗ್ ಹಾಗು ರುಚಿಕರ ಆಹಾರವನ್ನು ಸವಿಯಲು ವಿಶೇಷ ಅವಕಾಶವಾಗಲಿದೆ. ಈ ಕಾರ್ಯಕ್ರಮದಲ್ಲಿ ಸ್ಥಳೀಯ ಉದ್ಯಮಿಗಳು ಹಾಗು ಯುವ ಉದ್ಯಮಿಗಳಿಗೆ ತಮ್ಮ ಉತ್ಪನ್ನಗಳನ್ನು ಪರಿಚಯಿಸಲು ವೇದಿಕೆ ಸಿಗಲಿದೆ. ಜಿಲ್ಲೆಯ ವಾಣಿಜ್ಯ ಕ್ಷೇತ್ರಕ್ಕೂ ಇದು ಚೈತನ್ಯ ತುಂಬಲಿದೆ ಎಂಬ ಆಶಾಭಾವ ಆಯೋಜಕರದ್ದಾಗಿದೆ. ಜಿಲ್ಲೆಯ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಶ್ರೀ ವಿ ಗ್ರೂಪ್ಸ್ ಹಾಗು ಪ್ರಜೋದಯ ಪತ್ರಿಕೆಯಿಂದ ಕೋರಿದೆ.



## ನಿರೀಕ್ಷೆಗೂ ಮೀರಿ ಭಕ್ತರ ಆಗಮನ: ನಿಯಂತ್ರಣಕ್ಕೆ ಮುಂದಾದ ಜಿಲ್ಲಾಧಿಕಾರಿ

# ರಾತ್ರಿ 10 ಗಂಟೆಗೆ ದರ್ಶನದ ಪ್ರವೇಶ ದ್ವಾರ ಬಂದ್

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ದರ್ಶನಕ್ಕೆ ನಿರೀಕ್ಷೆಗೂ ಮೀರಿ ಭಕ್ತರು ಬರುತ್ತಿರುವುದರಿಂದ ವಿಶೇಷ ದರ್ಶನ ಹಾಗು ಧರ್ಮ ದರ್ಶನದ ಸಾಲುಗಳು ಭರ್ತಿಯಾಗಿವೆ. ಹೀಗಾಗಿ ರಾತ್ರಿ 10 ಗಂಟೆಗೆ ಭಕ್ತರ ಆಗಮನದ ಎಲ್ಲಾ ಪ್ರವೇಶ ದ್ವಾರಗಳನ್ನು ಬಂದ್ ಮಾಡಲಾಗುವುದೆಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗುರುವಾರ ನಮ್ಮ ನಿರೀಕ್ಷೆ ಮೀರಿ ಭಕ್ತರು ಬಂದಿರುವುದರಿಂದ ಪ್ರವೇಶ ದ್ವಾರವನ್ನು ಮುಚ್ಚಿ, ಈಗಾಗಲೇ ಸರದಿ ಸಾಲಿನಲ್ಲಿ ನಿಂತಿರುವ ಎಲ್ಲಾ ಭಕ್ತರಿಗೆ ಮಧ್ಯ ರಾತ್ರಿ 12ರ ವರೆಗೂ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗುವುದೆಂದು ತಿಳಿಸಿದರು.

ಶುಕ್ರವಾರ ಬೆಳಿಗ್ಗೆ 5 ಗಂಟೆಯಿಂದ ದರ್ಶನ ಆರಂಭವಾಗುವುದರಿಂದ ರಾತ್ರಿ ಇಡೀ ಸರದಿ ಸಾಲಿನಲ್ಲಿ ನಿಲ್ಲುವುದನ್ನು ತಪ್ಪಿಸಲು ಈ ಕ್ರಮ ಕೈಗೊಳ್ಳಲಾಗಿದೆ. » ನಾಲ್ಕನೇ ಪುಟದಲ್ಲಿ




E-mail : prajodayahsn@gmail.com
ಪ್ರಜೋದಯ
17 ಅಕ್ಟೋಬರ್ 2025 ಶುಕ್ರವಾರ
ಸಿನಿ ಪ್ರಪಂಚ

# ಈ ವಾರ ಚಿತ್ರಮಂದಿರಗಳಲ್ಲಿ ಏನು ವೀಕ್ಷಿಸಬೇಕು

**ಡ್ಯೂಡ್, ತೆಲುಸು ಕಡ, ಮತ್ತು ಇನ್ನಷ್ಟು: ಬೈಸನ್ ಅಂಡ್ ಡ್ಯೂಡ್‌ನಿಂದ ಹಿಡಿದು ಪಾತರಾತ್ರಿ ಮತ್ತು ತೆಲುಸು ಕಡ ವರೆಗೆ, ಅಕ್ಟೋಬರ್ ಮೂರನೇ ವಾರದಲ್ಲಿ ನೀವು ಚಿತ್ರಮಂದಿರಗಳಲ್ಲಿ ವೀಕ್ಷಿಸಬಹುದಾದ ಚಲನಚಿತ್ರಗಳ ಪಟ್ಟಿ ಇಲ್ಲಿದೆ.**





ಈ ವರ್ಷ ಚಲನಚಿತ್ರ ಪ್ರಿಯರಿಗೆ ದೀಪಾವಳಿ ಬೇಗನೆ ಬರುತ್ತಿದೆ, ಏಕೆಂದರೆ ಬೆಳಕಿನ ಹಬ್ಬಕ್ಕೂ ಮುನ್ನ ಈ ವಾರ ಎಲ್ಲಾ ಹಬ್ಬದ ಬಿಡುಗಡೆಗಳು ಸಾಲುಗಟ್ಟಿ ನಿಂತಿವೆ. ಬೈಸನ್ ಮತ್ತು ಡ್ಯೂಡ್‌ನಿಂದ ಪಾತಿರತ್ರಿ ಮತ್ತು ತೆಲುಸು ಕಡ ವರೆಗೆ , ಅಕ್ಟೋಬರ್ ಮೂರನೇ ವಾರದಲ್ಲಿ ನೀವು ಚಿತ್ರಮಂದಿರಗಳಲ್ಲಿ ವೀಕ್ಷಿಸಬಹುದಾದ ಚಲನಚಿತ್ರಗಳ ಪಟ್ಟಿ ಇಲ್ಲಿದೆ.

**1. ಕಾಡೆಮ್ಮೆ (ತಮಿಳು, ಅಕ್ಟೋಬರ್ 17):** ತನ್ನ ಡೇವಿಡ್‌ಗೆ ಗೋಲಿಯಾತ್‌ನಂತೆ ಕಾಣುವ ಜಗತ್ತಿನಲ್ಲಿ ಯುವಕನೊಬ್ಬನ ಧೈರ್ಯ, ದೃಢತೆ ಮತ್ತು ವೈಭವದ ಕುರಿತಾದ ಕಥೆ. ಯಾರೂ ಸಾಧ್ಯವಿಲ್ಲ ಎಂದು ನಂಬಿದ್ದನ್ನು ಮಾಡಲು ತನ್ನ ಕೈಯಲ್ಲಿರುವ ರೇಖೆಗಳನ್ನು ಧಿಕ್ಕರಿಸುವ ಮೂಲಕ ಬಂದೂಕಿಗಿಂತ ಕ್ರೀಡೆಯನ್ನು, ಹಿಂಸೆಗಿಂತ ಶಾಂತಿಯನ್ನು ಮತ್ತು ಸಾವಿನ ಬದಲು ಜೀವನವನ್ನು ಆರಿಸಿಕೊಂಡ ಯುವಕ. ತಾರಾಗಣ: ಧ್ರುವ ವಿಕ್ರಮ್, ಅನುಪಮಾ ಪರಮೇಶ್ವರನ್. ನಿರ್ದೇಶಕ: ಮಾರಿ ಸೆಲ್ವರಾಜ್.

**2. ಟೈಮ್‌ಪಾಸ್ (ಕನ್ನಡ, ಅಕ್ಟೋಬರ್ 17):** ಚಲನಚಿತ್ರೋದ್ಯಮದಲ್ಲಿ ಯಶಸ್ವಿಯಾಗಬೇಕೆಂದು ಹಠಮಾಡುವ ಏಳು ಕನಸುಗಾರರ ಪ್ರಕ್ಷುಬ್ಧ ಜೀವನವನ್ನು ಈ ವಿಚಿತ್ರವಾದ ಕರಾಳ ಹಾಸ್ಯ ಚಿತ್ರದಲ್ಲಿ ದಾಖಲಿಸಲಾಗಿದೆ. ತಾರಾಗಣ: ಇಮ್ರಾನ್ ಪಾಷಾ, ರಥಶ ರಾಮ್. ನಿರ್ದೇಶಕ: ಕೆ ಚೇತನ್ ಜೋಡಿಧರ್.

**3. ತೆಲುಸು ಕಡ (ತೆಲುಗು, ಅಕ್ಟೋಬರ್ 17):** ಈ ಚಿತ್ರವು ಸ್ನೇಹ, ಕೌಟುಂಬಿಕ ಚಲನಶೀಲತೆ, ಸ್ವಯಂ ತ್ಯಾಗದ ಮೌಲ್ಯ ಮತ್ತು ಸ್ವಯಂ ಸಾಕ್ಷಾತ್ಕಾರದತ್ತ ಪ್ರಯಾಣದ ಸಂಕೀರ್ಣ ಜಾಲವನ್ನು ಅನ್ವೇಷಿಸುತ್ತದೆ, ಸಾಂಪ್ರದಾಯಿಕ ಪ್ರಣಯ ವಿಷಯವನ್ನು ಮೀರಿದ ಕಥೆಯನ್ನು ಹೇಳುತ್ತದೆ. ತಾರಾಗಣ: ಸಿದ್ದು ಜೊನ್ನಲಗಡ್ಡ, ರಾಶಿ ಖನ್ನಾ, ಶ್ರೀನಿಧಿ ಶೆಟ್ಟಿ. ನಿರ್ದೇಶನ: ನೀರರಾಜ ಕೋನ.

**4. ದಿ ಪೆಟ್ ಡಿಟೆಕ್ಟಿವ್ (ಮಲಯಾಳಂ, ಅಕ್ಟೋಬರ್ 16):** ಟೋನಿ ಜೋಸ್ ಅಲುಲಾ ತನ್ನ ಪ್ರೀತಿಯ ಕೈಕೇಯಿ ಮೆನನ್ ಕೈ ಹಿಡಿಯುವ ಉದ್ದೇಶದಿಂದ ತನ್ನ ತಂದೆಯ ಪತ್ತೇದಾರಿ ಸಂಸ್ಥೆಯನ್ನು ಸೇರುತ್ತಾನೆ. ಟೋನಿ ತನ್ನ ವೃತ್ತಿಜೀವನವನ್ನು ಪೆಟ್ ಡಿಟೆಕ್ಟಿವ್ ಆಗಿ ಪ್ರಾರಂಭಿಸುತ್ತಾನೆ, ಆದರೆ ಅವನ ಪ್ರಕರಣಗಳು ಶೀಘ್ರದಲ್ಲೇ ಅಂತರರಾಷ್ಟ್ರೀಯ ಕಳ್ಳಸಾಗಣೆದಾರರನ್ನು ಒಳಗೊಂಡ ಅಪಾಯಕಾರಿ ಅಪಹರಣವಾಗಿ ಬದಲಾಗುತ್ತವೆ. ಟೋನಿ ಅಪರಾಧವನ್ನು ಪರಿಹರಿಸಬೇಕು, ತನ್ನ ಹೆಸರನ್ನು ತೆರವುಗೊಳಿಸಬೇಕು ಮತ್ತು ಕೈಕೇಯಿ ಪ್ರೀತಿಗೆ ಅರ್ಹನೆಂದು ಪ್ರದರ್ಶಿಸಬೇಕು, ಆದರೆ ಪ್ರತಿಸ್ಪರ್ಧಿ ಇನ್‌ಸ್ಪೆಕ್ಟರ್ ರಜತ್ ಅವನ ದಾರಿಯಲ್ಲಿ ನಿಂತಿದ್ದಾನೆ. ಪಾತ್ರವರ್ಗ: ಶರಫುದ್ದೀನ್, ಅನುಪಮಾ ಪರಮೇಶ್ವರನ್. ನಿರ್ದೇಶಕ: ಪ್ರಣೀಶ್ ವಿಜಯನ್.



**5. ಗೆಳೆಯ (ತಮಿಳು, ಅಕ್ಟೋಬರ್ 17):** ಅವರಿಗೆ ನೆನಪಿರುವವರೆಗೂ, ಅಗನ್ ಮತ್ತು ಕುರಲ್ ಪರಸ್ಪರರ ಜೀವನದ ಭಾಗವಾಗಿದ್ದಾರೆ, ಅವರು ಇಂದಿನ ಜನರಂತೆ ರೂಪುಗೊಂಡ ಅಸಂಖ್ಯಾತ ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಅವರು ಜೀವನದ ಹೊಸ ಹಂತವನ್ನು ಪ್ರವೇಶಿಸುವಾಗ ಅನಿರೀಕ್ಷಿತ ಅಡೆತಡೆಗಳು ಅವರ ಪ್ರಪಂಚದ ಜ್ಞಾನ ಮತ್ತು ತಮ್ಮನ್ನು ತಾವು ಪರೀಕ್ಷಿಸುತ್ತವೆ, ಅವರನ್ನು ಅಭಿವೃದ್ಧಿ, ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ರೂಪಾಂತರದ ಹಾದಿಯಲ್ಲಿ ಇರಿಸುತ್ತವೆ. ಪಾತ್ರವರ್ಗ: ಪ್ರದೀಪ್ ರಂಗನಾಥನ್, ಮಮಿತಾ ಬೈಜು. ನಿರ್ದೇಶಕ: ಕೀತೀಶ್ವರನ್.

**6. ಪ್ರೇಮಿಗಳ ಗಮನಕ್ಕೆ (ಕನ್ನಡ, ಅಕ್ಟೋಬರ್ 17):** ಹದಿಹರೆಯದವರನ್ನು ಗುರಿಯಾಗಿಸಿಕೊಂಡು, ಮದುವೆಯಿಲ್ಲದೆ ಒಟ್ಟಿಗೆ ವಾಸಿಸುವುದರಿಂದ ಉಂಟಾಗುವ ಸಂಭಾವ್ಯ ಸವಾಲುಗಳು ಮತ್ತು ಪರಿಣಾಮಗಳ ಬಗ್ಗೆ ಗಮನ ಸೆಳೆಯುತ್ತದೆ, ಹಾಗೆ ಮಾಡುವುದರಿಂದ ಉಂಟಾಗುವ ಅಪಾಯಗಳು ಮತ್ತು ಪರಿಣಾಮಗಳತ್ತ ಗಮನ ಸೆಳೆಯುತ್ತದೆ, ಅವರ ಸಂಬಂಧಗಳ ಬಗ್ಗೆ ಬುದ್ಧಿವಂತ ನಿರ್ಧಾರಗಳನ್ನು ತೆಗೆದುಕೊಳ್ಳಲು ಅವರಿಗೆ ಅಧಿಕಾರ ನೀಡುತ್ತದೆ. ಪಾತ್ರವರ್ಗ: ಶಶಿ ಕುಮಾರ್ ಬಿ.ಎಸ್., ಚಿರಶ್ರೀ ಅಂಚನ್. ನಿರ್ದೇಶಕ: ವಿನ್ಸೆಂಟ್ ಇನ್ಬರಾಜ್.

**7. ಕೆ-ರ್‍ಯಾಂಪ್ (ತೆಲುಗು, ಅಕ್ಟೋಬರ್ 18):** ಈ ಚಿತ್ರದ ಪ್ರಮುಖ ಪಾತ್ರವು ಶಾಂತ ಸ್ವಭಾವ ಮತ್ತು ದುಷ್ಕೃತ್ಯದ ಪ್ರವೃತ್ತಿಯನ್ನು ಹೊಂದಿದೆ. ಮರ್ಸಿಯೊಂದಿಗಿನ ಅವನ ಪ್ರಣಯದಲ್ಲಿ ಒಂದು ಬಿಕ್ಕಟ್ಟಿನ ಹಂತ ಬರುತ್ತದೆ, ಇದು ನಾಯಕನ ಈಗಾಗಲೇ ಅಸ್ಥಿರವಾದ ಜೀವನವನ್ನು ಮತ್ತಷ್ಟು ಅಸ್ಥಿರಗೊಳಿಸುತ್ತದೆ. ಪಾತ್ರವರ್ಗ: ಕಿರಣ್ ಅಬ್ಬಾವರಂ, ಯುಕ್ತಿ ತರೇಜಾ. ನಿರ್ದೇಶಕ: ಜೈನ್ಸ್ ನಾನಿ.



**8. ಪಾತಿರಾತ್ರಿ (ಮಲಯಾಳಂ, ಅಕ್ಟೋಬರ್ 17):** ಇದು ಅನಕ್ಕರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಹರೀಶ್ ಮತ್ತು ಪ್ರೊಬೇಷನರಿ ಎಸ್‌ಐ ಜಾನ್ಸಿ ನಡುವಿನ ಪ್ರಕ್ಷುಬ್ಧ ಸಂಬಂಧದ ಮೇಲೆ ಕೇಂದ್ರೀಕರಿಸುತ್ತದೆ, ಇದು ಹೆಚ್ಚಾಗಿ ಮಹಿಳೆಯರ ಬಗ್ಗೆ ಹರೀಶ್ ಅವರ ಅಪಕ್ವ ದೃಷ್ಟಿಕೋನಗಳಿಂದ ಉಂಟಾಗುತ್ತದೆ. ಹೆಚ್ಚುವರಿಯಾಗಿ, ಇಬ್ಬರೂ ಪೊಲೀಸರು ಗಂಭೀರವಾದ ಕೌಟುಂಬಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಒಂದು ರಾತ್ರಿ ಗಸ್ತು ತಿರುಗುತ್ತಿದ್ದಾಗ, ಒಂದು ಅನಿರೀಕ್ಷಿತ ಘಟನೆ ಅವರ ಜೀವನವನ್ನು ಸಂಪೂರ್ಣವಾಗಿ ತಲೆಕೆಳಗಾಗಿಸುತ್ತದೆ. ನಂತರದ ಘಟನೆಗಳ ಸರಣಿಯು ಅವರ ಪರಸ್ಪರ ಸಂಪರ್ಕಗಳಲ್ಲಿನ ಉದ್ವಿಗ್ನತೆ, ಹೊಣೆಗಾರಿಕೆಯ ಹೊರೆ ಮತ್ತು ಸತ್ಯದ ಅನ್ವೇಷಣೆಯನ್ನು ಎದುರಿಸಲು ಅವರನ್ನು ಒತ್ತಾಯಿಸುತ್ತದೆ. ಪಾತ್ರವರ್ಗ: ಸೌಬಿನ್ ಶಾಹಿರ್, ನವ್ಯಾ ನಾಯರ್. ನಿರ್ದೇಶಕ: ರಥೀನಾ.

**9. ಡೀಸೆಲ್ (ತಮಿಳು, ಅಕ್ಟೋಬರ್ 17):** ಇದು ಪೆಟ್ರೋಲಿಯಂ ಉದ್ಯಮ ಮತ್ತು ಅದರೊಂದಿಗೆ ನಡೆಯುವ ಮಾಫಿಯಾ ಚಟುವಟಿಕೆಗಳನ್ನು ಪರಿಶೋಧಿಸುತ್ತದೆ. ಪಾತ್ರವರ್ಗ: ಹರೀಶ್ ಕಲ್ಯಾಣ್, ಅತುಲ್ಯ ರವಿ. ನಿರ್ದೇಶಕ: ಷಣ್ಮುಗಂ ಮುತ್ತುಸ್ವಾಮಿ.

**10. ಮಿತ್ರ ಮಂಡಳಿ (ತೆಲುಗು, ಅಕ್ಟೋಬರ್ 16):** ಪ್ರೀತಿ ಮತ್ತು ಶುದ್ಧ ಮೂರ್ಖತನದಿಂದಾಗಿ, ಅಸಮರ್ಥ ಸ್ನೇಹಿತರ ಗುಂಪೊಂದು ಕೋಪಗೊಂಡ ರಾಜಕಾರಣಿ ಮತ್ತು ಅವನ ಅವಿಧೇಯ ಮಗಳನ್ನು ಒಳಗೊಂಡ ಹಾಸ್ಯಮಯ ಸನ್ನಿವೇಶದಲ್ಲಿ ಸಿಲುಕಿಕೊಳ್ಳುತ್ತದೆ. ಪಾತ್ರವರ್ಗ: ಪ್ರಿಯದರ್ಶಿ ಪುಲಿಕೊಂಡ, ನಿಹಾರಿಕಾ ಎನ್‌ಎಂ. ನಿರ್ದೇಶಕ: ವಿಜಯೇಂದರ್ ಸಟ್ಟು.




**11. ಕಂಬಿ ಕಟ್ನಾ ಕಥೈ (ತಮಿಳು, ಅಕ್ಟೋಬರ್ 17):** ಈ ಚಿತ್ರವು ಒಬ್ಬ ನಯವಾಗಿ ಮಾತನಾಡುವ ವಂಚಕ ವ್ಯಕ್ತಿಯ ಕಥೆಯನ್ನು ಹೇಳುತ್ತದೆ, ಅವನು ದೇವಮಾನವನಾಗಿ ಗೌರವವನ್ನು ಪಡೆಯಲು ಮೋಸ ಮಾಡುತ್ತಾನೆ. ಕಥೆಯು ಅವನನ್ನು ಅನುಸರಿಸುತ್ತದೆ, ಅವನು ಸಮಾಜದ ಮೂಲಕ ಸಾಗುತ್ತಾನೆ, ಅಡೆತಡೆಗಳನ್ನು ಎದುರಿಸುತ್ತಾನೆ ಮತ್ತು ಹಾಸ್ಯಮಯ ಘಟನೆಗಳ ತಿರುವುಗಳಲ್ಲಿ, ನಿಷ್ಠಾವಂತ ಅಭಿಮಾನಿ ನೆಲೆಯನ್ನು ಮತ್ತು ತನ್ನದೇ ಆದ ಖಾಸಗಿ ದ್ವೀಪವನ್ನು ಪಡೆಯುತ್ತಾನೆ. ಪಾತ್ರವರ್ಗ: ನಾಟಿ, ಆರತಿ ಶಾಲಿನಿ. ನಿರ್ದೇಶಕ: ರಾಜನಾಥನ್ ಪೆರಿಯಸಾಮಿ.


## 17-10-2025 ದಿನ ಭವಿಷ್ಯ



**ಮೇಷ:** ಸ್ವಯಂ ಸುಧಾರಣೆಯ ಯೋಜನೆಗಳು ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಫಲ ನೀಡುತ್ತವೆ - ನಿಮ್ಮ ಬಗ್ಗೆ ನಿಮಗೇ ಒಳ್ಳೆಯದೆನಿಸುತ್ತದೆ ಮತ್ತು ವಿಶ್ವಾಸ ಮೂಡುತ್ತದೆ. ಆಸ್ತಿ ವ್ಯವಹಾರಗಳು ಅಸಾಧಾರಣ ಲಾಭ ತರುತ್ತವೆ. ನಿಮ್ಮ ಮಗುವಿನಂಥ ಮತ್ತು ಮುಗ್ಧ ವರ್ತನೆ ಕುಟುಂಬದ ಸಮಸ್ಯೆಯನ್ನು ಪರಿಹರಿಸುವಲ್ಲಿ ಒಂದು ಪ್ರಮುಖ ಪಾತ್ರ ವಹಿಸುತ್ತದೆ.



**ವೃಷಭ:** ಗಾಯಗೊಳ್ಳುವುದನ್ನು ತಪ್ಪಿಸಲು ಕುಳಿತುಕೊಳ್ಳುವಾಗ ವಿಶೇಷ ಕಾಳಜಿ ವಹಿಸಿ. ಅಲ್ಲದೇ ಒಳ್ಳೆಯ ನಿಲುವು ಕೇವಲ ನಿಮ್ಮ ವ್ಯಕ್ತಿತ್ವವನ್ನು ವೃದ್ಧಿಸುವುದಷ್ಟೇ ಅಲ್ಲದೇ ಆರೋಗ್ಯ ಮತ್ತು ವಿಶ್ವಾಸಾರ್ಹತೆಯನ್ನು ಅಭಿವೃದ್ಧಿಪಡಿಸುವಲ್ಲೂ ಪ್ರಮುಖ ಪಾತ್ರ ವಹಿಸುತ್ತದೆ.




**ಮಿಥುನ:** ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ. ಚಂದ್ರನ ಸ್ಥಾನದಿಂದಾಗಿ, ಇಂದು ನಿಮ್ಮ ಹಣವನ್ನು ಅನಗತ್ಯ ಕೆಲಸಗಳಿಗೆ ಖರ್ಚು ಮಾಡಬಹುದು. ನೀವು ಹಣವನ್ನು ಸಂಗ್ರಹಿಸಲು ಬಯಸಿದರೆ ನಿಮ್ಮ ಸಂಗಾತಿಯೊಂದಿಗೆ ಅಥವಾ ಪೋಷಕರೊಂದಿಗೆ ಮಾತನಾಡಿ. ಸಂಬಂಧಿಕರು ಮತ್ತು ಸ್ನೇಹಿತರಿಂದ ಅನಿರೀಕ್ಷಿತ ಉಡುಗೊರೆಗಳು.



**ಕರ್ಕಾಟಕ:** ಸ್ನೇಹಿತರ ಮೂಲಕ ದೊರಕುವ ಜ್ಯೋತಿಶ್ಶಾಸ್ತ್ರದ ಮಾರ್ಗದರ್ಶನ ನಿಮ್ಮ ಆರೋಗ್ಯವನ್ನು ಸುಧಾರಿಸಲು ನಿಮ್ಮನ್ನು ಉತ್ತೇಜಿಸುತ್ತದೆ. ನಿಮ್ಮ ಹೆಚ್ಚುವರಿ ಹಣವನ್ನು ಒಂದು ಸುರಕ್ಷಿತ ಸ್ಥಳದಲ್ಲಿರಿಸಿ ಹಾಗೂ ಇದು ಮುಂದಿನ ಕಾಲದಲ್ಲಿ ನಿಮಗೆ ಒಳ್ಳೆಯ ಆದಾಯ ತರುತ್ತದೆ. ನಿಮ್ಮ ಅತಿಯಾದ ಜೀವನಶೈಲಿ ಮನೆಯಲ್ಲಿ ಆತಂಕ ಸೃಷ್ಟಿಸಬಹುದು.




**ಸಿಂಹ:** ನಿಮ್ಮ ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟುಮಾಡಬಹುದಾದ್ದರಿಂದ ನಿಮ್ಮ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ. ದಿನದಲ್ಲಿ ನಂತರ ಹಣಕಾಸು ಪರಿಸ್ಥಿತಿಗಳು ಸುಧಾರಿಸುತ್ತವೆ. ಹೊಸ ಯೋಜನೆಗಳು ಮತ್ತು ವಿಚಾರಗಳನ್ನು ಕಾರ್ಯರೂಪಕ್ಕೆ ತರಲು ಒಳ್ಳೆಯ ದಿನ.



**ಕನ್ಯಾ:** ವಿಶೇಷವಾಗಿ ಬಿಕ್ಕಟ್ಟಿನ ಸಮಯದಲ್ಲಿ ನಿಮ್ಮ ತಾಳ್ಮೆ ಕಳೆದುಕೊಳ್ಳಬೇಡಿ. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ. ಈ ಹಣ ನಿಮ್ಮ ಅನೇಕ ಸಮಸೆಗಳನ್ನು ದೂರ ಮಾಡಬಹುದು. ಸ್ವಾನುಕಂಪದಲ್ಲಿ ಸಮಯ ವ್ಯರ್ಥ ಮಾಡದೇ ಜೀವನದ ಪಾಠಗಳನ್ನು ಕಲಿಯಲು ಪ್ರಯತ್ನಿಸಿ.



**ತುಲಾ:** ನಿಮ್ಮ ನಗು ಖಿನ್ನತೆಯ ವಿರುದ್ಧ ಕೆಲಸ ಮಾಡುತ್ತದೆ. ಇಂದು ನೀವು ಒಳ್ಳೆಯ ಹಣ ಮಾಡುತ್ತೀರಿ - ಆದರೆ ಅದು ನಿಮ್ಮ ಕೈಯಿಂದ ಜಾರಿಹೋಗದಿರಲು ಪ್ರಯತ್ನಿಸಿ. ನಿಮ್ಮ ಮನೆಯ ವಾತಾವರಣವನ್ನು ಬದಲಾಯಿಸುವ ಮೊದಲು ಅದಕ್ಕೆ ಎಲ್ಲರ ಅನುಮೋದನೆಯಿದೆಯೆಂದು ಖಾತ್ರಿಪಡಿಸಿಕೊಳ್ಳಿ.




**ವೃಶ್ಚಿಕ:** ಸಂಗಾತಿಯ ಆರೋಗ್ಯಕ್ಕೆ ಸೂಕ್ತ ರಕ್ಷಣೆ ಮತ್ತು ಗಮನದ ಅಗತ್ಯವಿದೆ. ಹಣಕಾಸು ಸ್ಥಿತಿ ಊಹಾಪೋಹ ಅಥವಾ ಅನಿರೀಕ್ಷಿತ ಲಾಭದ ಮೂಲಕ ಸುಧಾರಿಸುತ್ತವೆ. ನಿಮ್ಮ ಅತಿಯಾದ ಜೀವನಶೈಲಿ ಮನೆಯಲ್ಲಿ ಆತಂಕ ಸೃಷ್ಟಿಸಬಹುದು ಆದ್ದರಿಂದ ತಡರಾತ್ರಿಯನ್ನು ಹಾಗೂ ಇತರರ ಮೇಲೆ ಬಹಳ ಖರ್ಚು ಮಾಡುವುದನ್ನು ತಪ್ಪಿಸಿ.



**ಧನು:** ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ನೀವು ಇಂದು ಹಣ ಉಳಿಸುವುದು ಕಷ್ಟ ನೀವು ಇಂದು ಅತಿಯಾಗಿ ಖರ್ಚು ಮಾಡುವ ಅಥವಾ ನಿಮ್ಮ ಪರ್ಸ್ ಕಳೆದುಕೊಳ್ಳುವ ಸಾಧ್ಯತೆಗಳಿವೆ ನಿರ್ಲಕ್ಷ್ಯತನದಿಂದ ಕೆಲವು ಸಮಸ್ಯೆಗಳು ಖಂಡಿತ. ನಿಮ್ಮ ಕುಟುಂಬದ ಕಲ್ಯಾಣಕ್ಕಾಗಿ ಕೆಲಸ ಮಾಡಿ. ನಿಮ್ಮ ಮನಸ್ಸನ್ನು ನಿಯಂತ್ರಿಸುವುದನ್ನು ಕಲಿಯಿರಿ.



**ಮಕರ:** ನಿಮ್ಮ ಬಲವಾದ ಧೃಢತೆ ಮತ್ತು ನಿರ್ಭಯತೆ ನಿಮ್ಮ ಮಾನಸಿಕ ಶಕ್ತಿ ವರ್ಧಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ಇದು ನಿಮಗೆ ಯಾವುದೇ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ಉತ್ತೇಜಿಸುವುದರಿಂದ ಇದನ್ನು ಕಾಯ್ದುಕೊಳ್ಳಿ. ಇಂದು ನೀವು ಯಾವುದೇ ಅಜ್ಞಾತ ಮೂಲಗಳಿಂದ ಹಣವನ್ನು ಪಡೆಯಬಹುದು, ಇದರಿಂದ ನಿಮ್ಮ ಅನೇಕ ಆರ್ಥಿಕ ಸಮಸ್ಯೆಗಳು ದೂರವಾಗುತ್ತವೆ.



**ಕುಂಭ:** ಧ್ಯಾನ ಮತ್ತು ಆತ್ಮ ಸಾಕ್ಷಾತ್ಕಾರ ಪ್ರಯೋಜನಕಾರಿಯಾಗಬಹುದು. ಹಣಕಾಸು ಲಾಭಗಳು ವಿವಿಧ ಮೂಲಗಳಿಂದ ಬರುತ್ತದೆ. ಮಕ್ಕಳಿಂದ ಅನಿರೀಕ್ಷಿತ ಸುದ್ದಿ ಸಂತೋಷದ ಕ್ಷಣಗಳನ್ನು ತರುತ್ತದೆ. ಒಂದು ಅಚ್ಚರಿಯ ಸಂದೇಶ ನಿಮಗೆ ಸಿಹಿ ಕನಸುಗಳನ್ನು ನೀಡುತ್ತದೆ. ನಿಮ್ಮ ಕೆಲಸ ಮತ್ತು ನಿಮ್ಮ ಆದ್ಯತೆಗಳ ಮೇಲೆ ಗಮನವಿಡಿ. ಇಂದು ನೀವು ವಿವಾಹದ ನಿಜವಾದ ಭಾವಪರವಶತೆಯನ್ನು ತಿಳಿಯುತ್ತೀರಿ.



**ಮೀನ:** ಖಿನ್ನತೆಯನ್ನು ಹೊಡೆದೋಡಿಸಿ ಇದು ನಿಮ್ಮನ್ನು ಆವರಿಸಿಕೊಳ್ಳುತ್ತಿದೆ ಮತ್ತು ನಿಮ್ಮ ಪ್ರಗತಿಗೆ ಅಡ್ಡಿಪಡಿಸುತ್ತಿದೆ. ಮನೆಯ ಅಗತ್ಯಗಳನ್ನು ನೋಡುತ್ತಾ, ಇಂದು ನೀವು ನಿಮ್ಮ ಜೀವನ ಸಂಗಾತಿಯೊಂದಿಗೆ ಯಾವುದೇ ಅಮೂಲ್ಯ ವಸ್ತುವನ್ನು ಖರೀದಿಸಬಹುದು, ಇದರಿಂದ ಆರ್ಥಿಕ ಪರಿಸ್ಥಿತಿ ಸ್ವಲ್ಪ ತೊಂದರೆಗೊಳಗಾಗಬಹುದು.

## ವಿಜಯ್ ಕುಮಾರ್ ಮತ್ತು ಶ್ರೇಯಸ್ ಮಂಜು ಅಭಿನಯದ ಈ ಚಿತ್ರದ ಬಿಡುಗಡೆ ದಿನಾಂಕ ಈಗ ಹೊಸದು....

**ಥಿಯೇಟರ್ ಬಿಕ್ಕಟ್ಟಿನ ನಡುವೆ ಮಾರುತ ಬಿಡುಗಡೆಯನ್ನು ನವೆಂಬರ್‌ಗೆ ಮುಂದೂಡಲಾಗಿದೆ.**

ಕರ್ನಾಟಕದಾದ್ಯಂತ ಚಿತ್ರಮಂದಿರಗಳ ಕೊರತೆಯಿಂದಾಗಿ ವಿಜಯ್ ಕುಮಾರ್ ಮತ್ತು ಶ್ರೇಯಸ್ ಮಂಜು ಅಭಿನಯದ ಮಾರುತ ಚಿತ್ರದ ಬಿಡುಗಡೆಯನ್ನು ಮರು ನಿಗದಿಪಡಿಸಲಾಗಿದೆ. ಆರಂಭದಲ್ಲಿ ಅಕ್ಟೋಬರ್ 31 ರಂದು ಬಿಡುಗಡೆಯಾಗಬೇಕಿದ್ದ ಈ ಚಿತ್ರವು ಈಗ ನವೆಂಬರ್ 21 ರಂದು ಚಿತ್ರಮಂದಿರಗಳಿಗೆ ಆಗಮಿಸಲಿದೆ.

ಈಶಾ ಪ್ರೊಡಕ್ಷನ್ಸ್ ಅಡಿಯಲ್ಲಿ ಕೆ ಮಂಜು ಮತ್ತು ರಮೇಶ್ ಯಾದವ್ ನಿರ್ಮಿಸಿರುವ ಈ ಚಿತ್ರವು, ವ್ಯಾಪಕ ಬಿಡುಗಡೆಗೆ ತಂಡವು ತಯಾರಿ ನಡೆಸುತ್ತಿರುವಾಗ ಪ್ರೇಕ್ಷಕರ ನಿರಂತರ ಬೆಂಬಲ ಮತ್ತು ತಾಳ್ಮೆಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ತಯಾರಕರು ಅಧಿಕೃತ ಹೇಳಿಕೆಯ ಮೂಲಕ ಹೊಸ ದಿನಾಂಕವನ್ನು ಘೋಷಿಸಿದ್ದಾರೆ.

ದೊಡ್ಡ ಪ್ರಮಾಣದಲ್ಲಿ ಚಿತ್ರೀಕರಿಸಲಾದ ಮಾರುತ ಚಿತ್ರವು ಎಸ್ ನಾರಾಯಣ್ ಅವರ ಭಾವನಾತ್ಮಕ ಕಥೆ ಹೇಳುವಿಕೆಯನ್ನು ಶ್ರೀಮಂತ ನಿರ್ಮಾಣ ವಿನ್ಯಾಸದೊಂದಿಗೆ ಸಂಯೋಜಿಸುತ್ತದೆ. ತಾಂತ್ರಿಕ ತಂಡದಲ್ಲಿ ಪಿಕೆಹೆಚ್ ದಾಸ್ ಛಾಯಾಗ್ರಾಹಕರಾಗಿ, ಶಿವಪ್ರಸಾದ್ ಯಾದವ್ ಸಂಕಲನವನ್ನು ನಿರ್ವಹಿಸುತ್ತಿದ್ದಾರೆ, ವಿನೋದ್ ಮತ್ತು ಅರ್ಜುನ್ ಸಾಹಸ ನಿರ್ದೇಶನ ಮಾಡುತ್ತಿದ್ದಾರೆ, ಮತ್ತು ಮೋಹನ್ ಕುಮಾರ್ ಮತ್ತು ಸಂತು ನೃತ್ಯ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ, ಎಸ್ ನಾರಾಯಣ್ ಸಂಗೀತ ಸಂಯೋಜಿಸಿದ್ದಾರೆ ಮತ್ತು ಜಾಸ್ಸಿ ಗಿಫ್ಟ್ ಧ್ವನಿಪಥಕ್ಕೆ ಕೊಡುಗೆ ನೀಡಿದ್ದಾರೆ.




ಮೇಳದ ತಾರಾಗಣದಲ್ಲಿ ಬೃಂದಾ ಆಚಾರ್ಯ ನಾಯಕಿಯಾಗಿ ಸಾಧು ಕೋಕಿಲಾ, ನಿಶ್ವಿಕಾ ನಾಯ್ಡು, ರಂಗಾಯಣ ರಘು, ತಾರಾ ಅನುರಾಧ, ಶರತ್ ಲೋಹಿತಾಶ್ವ, ಪ್ರಮೋದ್ ಶೆಟ್ಟಿ, ಮಂಜು ಪಾವಗಡ, ಚಿತ್ರಾ, ಶೆಣೈ ಮತ್ತು ಸುಜಯ್ ಶಾಸ್ತ್ರಿ ಇದ್ದಾರೆ. ಚಿತ್ರದಲ್ಲಿ ಕ್ರೇಜಿ ಸ್ಟಾರ್ ರವಿಚಂದ್ರನ್ ಅವರು ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಎಸ್ ನಾರಾಯಣ್ ನೇತೃತ್ವದಲ್ಲಿ, ಮಾರುತಿ ಭಾವನೆ, ಸಾಮೂಹಿಕ ಆಕರ್ಷಣೆ ಮತ್ತು ಸಿನಿಮೀಯ ಶೈಲಿಯ ಮಿಶ್ರಣವನ್ನು ತರುವ ಆಶಯವನ್ನು ಹೊಂದಿದೆ.

### » ಶರತ್ ಮತ್ತು ಶರಧಿ ಕಿರುಚಿತ್ರದಲ್ಲಿ ಅಂಧ ದಂಪತಿ ನಟನೆ; ದತ್ತಣ್ಣ ಮೆಚ್ಚುಗೆ

ಹಿರಿಯ ನಟ ದತ್ತಣ್ಣ ಅವರು ಶರತ್ ಮತ್ತು ಶರಧಿ ಕಿರುಚಿತ್ರದಲ್ಲಿ ನಟನೆ ಮಾಡಿದ್ದಾರೆ. ಈ ಕಿರುಚಿತ್ರದಲ್ಲಿ ಅಶ್ವಿನಿ ಮತ್ತು ವೀರೇಶ್ ಎಂ. ಅವರು ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಏಪ್ರಿಲ್‌ನ ಹಿಮಬಿಂದು ಖ್ಯಾತಿಯ ಎಂ. ಜಗದೀಶ್ ಅವರು ಶರತ್ ಮತ್ತು ಶರಧಿಗೆ ನಿರ್ದೇಶನ ಮಾಡಿದ್ದಾರೆ.



## ಕೆಡಿ ಬಿಡುಗಡೆಗಾಗಿ ಕಾಯುತ್ತಿರುವ ನಿರ್ದೇಶಕ ಪ್ರೇಮ್

ತಮ್ಮ ಮುಂದಿನ ನಡೆಯ ಬಗ್ಗೆ ಬಾಯಿಬಿಟ್ಟಿಲ್ಲದ ಚಿತ್ರ ನಿರ್ಮಾಪಕರು, ಅಜಯ್ ದೇವಗನ್ ಸೇರಿದಂತೆ ಬಿ-ಟೌನ್ ನಿರ್ಮಾಣ ಸಂಸ್ಥೆಗಳು ಮತ್ತು ನಟರೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ ಎಂದು ಹೇಳಲಾಗುತ್ತಿದೆ.

ನಿರ್ದೇಶಕ ಪ್ರೇಮ್ ತಮ್ಮ ಬಹುನಿರೀಕ್ಷಿತ ಪ್ಯಾನ್-ಇಂಡಿಯಾ ಚಿತ್ರ ಕೆಡಿ ಬಿಡುಗಡೆಗಾಗಿ ಕಾಯುತ್ತಿದ್ದಾರೆ. ಈ ಚಿತ್ರದಲ್ಲಿ ಧ್ರುವ ಸರ್ಜಾ ಜೊತೆಗೆ ರವಿಚಂದ್ರನ್, ರಮೇಶ್ ಅರವಿಂದ್ ಮತ್ತು ಸುದೀಪ್ ನಟಿಸಿದ್ದಾರೆ. ಬಾಲಿವುಡ್ ನ ದಿಗ್ಗಜರಾದ ಸಂಜಯ್ ದತ್ ಮತ್ತು ಶಿಲ್ಪಾ ಶೆಟ್ಟಿ ಕೂಡ ನಟಿಸಿದ್ದಾರೆ. ಕೆವಿಎನ್ ಪ್ರೊಡಕ್ಷನ್ಸ್ ಅಡಿಯಲ್ಲಿ ನಿರ್ಮಿಸಲಾದ ಕೆಡಿ ಚಿತ್ರವು ಇನ್ನೂ ವಿವರಿಸಲಾಗದ ಕಾರಣಗಳಿಂದಾಗಿ ವಿಳಂಬವಾಗಿದ್ದು, ಅಭಿಮಾನಿಗಳು ಮತ್ತು ತಂಡವು ಸ್ಪಷ್ಟತೆಗಾಗಿ ಕಾತರದಿಂದ ಕಾಯುತ್ತಿದೆ.

ಏತನ್ಮಧ್ಯೆ, ಮಹಾಕಾಳೇಶ್ವರದಲ್ಲಿ ನಡೆದ ಚಿತ್ರದ ಸ್ಕ್ರಿಪ್ಟ್ ಪೂಜೆಯ ಝಲಕ್‌ಗಳನ್ನು ಪ್ರೇಮ್ ಹಂಚಿಕೊಂಡರು, ಇದನ್ನು ನನ್ನ ದೊಡ್ಡ ಕನಸುಗಳಲ್ಲಿ ಒಂದು ಎಂದು ಕರೆದರು. ಕೆಡಿ ಬಿಡುಗಡೆ ದಿನಾಂಕವನ್ನು ಶೀಘ್ರದಲ್ಲೇ ಘೋಷಿಸಲಾಗುವುದು ಎಂದು ಅವರು ಭರವಸೆ ನೀಡಿದರು, ಆದರೆ ಈ ವರ್ಷ ಚಿತ್ರ ಬಿಡುಗಡೆಯಾಗುವ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ. ನಾವು ಪ್ರೇಮ್ ಅವರನ್ನು ಸಂಪರ್ಕಿಸಿದಾಗ, ತಯಾರಕರು ಅದನ್ನು ಘೋಷಿಸಲು ಸೂಕ್ತ ಕ್ಷಣಕ್ಕಾಗಿ ಕಾಯುತ್ತಿದ್ದಾರೆ ಎಂದು ಅವರು ಒಪ್ಪಿಕೊಂಡರು. ಆದರೆ ಕೆಡಿ ಸುತ್ತ ಉತ್ಸಾಹ ಹೆಚ್ಚಿದೆ.

ಪ್ರೇಮ್ ಅವರ ಕೆಡಿ ಚಿತ್ರದಲ್ಲಿ ಸುದೀಪ್ ಪ್ರಮುಖ ಪಾತ್ರದಲ್ಲಿ ನಟಿಸಲಿದ್ದಾರೆ.



**ಬಾಲಿವುಡ್‌ಗೆ ಪಾದಾರ್ಪಣೆ ಮಾಡುವ ಕನಸು**

ಕೆಡಿ ಬಿಡುಗಡೆ ಇನ್ನೂ ಮುಚ್ಚಿಹೋಗಿದ್ದರೂ, ಪ್ರೇಮ್ ಸ್ವಲ್ಪ ಸಮಯದಿಂದ ಪೋಷಿಸುತ್ತಿದ್ದ ಮತ್ತೊಂದು ಸ್ಕ್ರಿಪ್ಟ್‌ನಲ್ಲಿ ಸದ್ದಿಲ್ಲದೆ ನಿರತರಾಗಿದ್ದಾರೆ. ಕನ್ನಡ ಚಲನಚಿತ್ರ ನಿರ್ಮಾಪಕರು ತಮ್ಮ ಬಾಲಿವುಡ್ ಚೊಚ್ಚಲ ಪ್ರವೇಶದ ಮೇಲೆ ಕಣ್ಣಿಟ್ಟಿದ್ದಾರೆ ಮತ್ತು ಅವರು ಬೇರೆ ಯಾರೂ ಅಲ್ಲ, ಬಾಲಿವುಡ್ ನಟ ಅಜಯ್ ದೇವಗನ್ ಅವರೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ ಎಂದು ಮೂಲಗಳು ಸುಳಿವು ನೀಡಿವೆ. ಅವರು ಇತರ ಕೆಲವು ನಿರ್ಮಾಣ ಸಂಸ್ಥೆಗಳು ಮತ್ತು ನಟರೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ. ನಾನು ಬಾಲಿವುಡ್‌ನಲ್ಲಿ ಕೆಲವು ನಟರನ್ನು ಭೇಟಿಯಾಗಿದ್ದೇನೆ. ಮತ್ತು ದಕ್ಷಿಣ ನಿರ್ದೇಶಕನಾಗಿ, ಅಲ್ಲಿನ ಪ್ರೋತ್ಸಾಹವು ಹೃದಯಸ್ಪರ್ಶಿಯಾಗಿದೆ. ನಾನು ಬಲವಾದ ಸ್ಕ್ರಿಪ್ಟ್‌ನೊಂದಿಗೆ ಪ್ರವೇಶ ಪಡೆಯಲು ಬಯಸುತ್ತೇನೆ ಎಂದು ಅವರು ಹೇಳುತ್ತಾರೆ.

ಏತನ್ಮಧ್ಯೆ, ಪ್ರೇಮ್ ತಮ್ಮ ಮುಂದಿನ ಕನ್ನಡ ಯೋಜನೆಯನ್ನು ನಿರ್ಲಕ್ಷಿಸುತ್ತಿಲ್ಲ. ಬಾಲಿವುಡ್ ಸಾಹಸದ ಜೊತೆಗೆ, ಅವರು ತಮ್ಮ ನಿಷ್ಠಾವಂತ ಪ್ರಾದೇಶಿಕ ಪ್ರೇಕ್ಷಕರನ್ನು ಗಮನದಲ್ಲಿಟ್ಟುಕೊಂಡು ಹೊಸ ಕನ್ನಡ ಚಿತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ವರದಿಯಾಗಿದೆ. ನಿರ್ದೇಶಕರು ಎರಡೂ ಪ್ರಪಂಚಗಳನ್ನು ಸಮತೋಲನಗೊಳಿಸಲು ದೃಢನಿಶ್ಚಯ ಮಾಡಿದ್ದಾರೆ. ನಟ ದರ್ಶನ್ ಅವರೊಂದಿಗಿನ ಸಹಯೋಗದ ವದಂತಿಗಳ ಬಗ್ಗೆ ಕೇಳಿದಾಗ, ಖಂಡಿತ, ಅವರು ತಮ್ಮ ಕಾನೂನು ಸಮಸ್ಯೆಗಳಿಂದ ಹೊರಬಂದಾಗಲೆಲ್ಲಾ, ನಾನು ಅವರಿಗಾಗಿ ಚಿತ್ರ ನಿರ್ದೇಶಿಸುತ್ತೇನೆ. ಅವರು ಕುಟುಂಬದವರಂತೆ ಎಂದು ಅವರು ಹೇಳಿದರು.

## ಶ್ರೀನಿವಾಸ್ ರಾಜು ಅವರ ಕೌಟುಂಬಿಕ ನಾಟಕದಲ್ಲಿ ಗಣೇಶ್ ಎದುರು ಮಾಳವಿಕಾ ಶರ್ಮಾ ಕನ್ನಡಕ್ಕೆ ಪಾದಾರ್ಪಣೆ ಮಾಡಲಿದ್ದಾರೆ

- **ಕೃಷ್ಣಂ ಪ್ರಣಯ ಸಖಿ ಚಿತ್ರದ ನಂತರ ಗೋಲ್ಡನ್ ಸ್ಟಾರ್ ಗಣೇಶ್ ಮತ್ತು ನಿರ್ದೇಶಕರು ಮತ್ತೆ ಒಂದಾಗುವ ಈ ಹೆಸರಿಡದ ಚಿತ್ರ ಇದಾಗಿದ್ದು, ದೇವಿಕಾ ಭಟ್ ಕೂಡ ನಾಯಕಿಯರಲ್ಲಿ ಒಬ್ಬಳಾಗಿ ನಟಿಸುತ್ತಿದ್ದಾರೆ.**

ಕೃಷ್ಣಂ ಪ್ರಣಯ ಸಖಿ ಚಿತ್ರದ ಯಶಸ್ವಿ ಸಹಯೋಗದ ನಂತರ ಗೋಲ್ಡನ್ ಸ್ಟಾರ್ ಗಣೇಶ್ ಮತ್ತೊಮ್ಮೆ ನಿರ್ದೇಶಕ ಶ್ರೀನಿವಾಸ್ ರಾಜು ಅವರೊಂದಿಗೆ ಕೈಜೋಡಿಸುತ್ತಿದ್ದಾರೆ. ಆಗಸ್ಟ್‌ನಲ್ಲಿ ಸೆಟ್ಟೇರಿದ್ದ ಹೆಸರಿಡದ ಪ್ರಣಯ ಕುಟುಂಬ ನಾಟಕಕ್ಕಾಗಿ ಅವರು ಮತ್ತೆ ಒಂದಾಗುತ್ತಿದ್ದಾರೆ. ಸಮೃದ್ಧಿ ಮಂಜುನಾಥ್ ಅವರ ಕೆವಿಸಿ ಪ್ರೊಡಕ್ಷನ್ಸ್ ಬೆಂಬಲದೊಂದಿಗೆ ಮತ್ತು ವಿರಾಟ್ ಸಾಯಿ ಕ್ರಿಯೇಷನ್ಸ್ ಪ್ರಸ್ತುತಪಡಿಸಿದ ಈ ಚಿತ್ರವು ಈಗಾಗಲೇ ಅದರ ಚಿತ್ರೀಕರಣದ 60 ಪ್ರತಿಶತವನ್ನು ಪೂರ್ಣಗೊಳಿಸಿದೆ.

ಈ ಯೋಜನೆಯಲ್ಲಿ ಇಬ್ಬರು ಮಹಿಳಾ ನಾಯಕಿಯರು ನಟಿಸಿದ್ದು, ದೇವಿಕಾ ಭಟ್ ಅಧಿಕೃತವಾಗಿ ತಾರಾಗಣಕ್ಕೆ ಸೇರ್ಪಡೆಗೊಂಡಿದ್ದರೂ, ಮಾಳವಿಕಾ ಶರ್ಮಾ ಈ ಚಿತ್ರದ ಮೂಲಕ ಕನ್ನಡಕ್ಕೆ ಪಾದಾರ್ಪಣೆ ಮಾಡಲಿದ್ದಾರೆ ಎಂದು ಊಹಿಸಲಾಗಿದೆ. ವಕೀಲೆಯಿಂದ ರೂಪದರ್ಶಿಯಾಗಿ, ನಟಿಯಾಗಿ ಬೆಳೆದ ಮಾಳವಿಕಾ, ಈ ಹಿಂದೆ ತೆಲುಗು ಮತ್ತು ತಮಿಳು ಚಿತ್ರಗಳಾದ ನೆಲ ಟಿಕೆಟ್ (2018), ರೆಡ್ (2021), ಕಾಫಿ ವಿತ್ ಕಾದಲ್ (2022), ಭೀಮಾ (2024), ಮತ್ತು ಹರೋಮ್ ಹರ (2024) ಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಅವರ ಅಧಿಕೃತ ಚಿತ್ರ ಪ್ರವೇಶ ಇನ್ನೂ ಔಪಚಾರಿಕವಾಗಿ ಘೋಷಿಸಲ್ಪಟ್ಟಿಲ್ಲವಾದರೂ, ಅವರು ಈ ತಿಂಗಳು ಚಿತ್ರೀಕರಣಕ್ಕೆ ಸೇರುವ ನಿರೀಕ್ಷೆಯಿದೆ.

ಈ ಚಿತ್ರವನ್ನು ಈಗಾಗಲೇ ಮೈಸೂರಿನಾದ್ಯಂತ ಸ್ಥಳಗಳಲ್ಲಿ ಚಿತ್ರೀಕರಿಸಲಾಗಿದ್ದು, ಕೇರಳ, ಉತ್ತರ ಭಾರತ ಮತ್ತು ಭೂತಾನ್‌ನ ಸುಂದರವಾದ ಸ್ಥಳಗಳನ್ನು ಅನ್ವೇಷಿಸುವ ಯೋಜನೆ ಇದೆ. ಈ ಚಿತ್ರವು ಒಂದು ದೃಶ್ಯ ರಸದೌತಣವನ್ನು ನೀಡುವ ಗುರಿಯನ್ನು ಹೊಂದಿದೆ.

ಪ್ರಣಯ ಮೋಡಿಗೆ ಹೆಸರುವಾಸಿಯಾದ ಗಣೇಶ್ ಸಂಪೂರ್ಣವಾಗಿ ಹೊಸ ಪಾತ್ರದಲ್ಲಿ ನಟಿಸುತ್ತಿದ್ದಾರೆ.

ಅವರು ಸಂಗೀತ, ಕೃಷಿ ಮತ್ತು ಪ್ರಕೃತಿಯೊಂದಿಗೆ ಆಳವಾದ ಸಂಪರ್ಕ ಹೊಂದಿರುವ ಬುದ್ಧಿಜೀವಿಯ ಪಾತ್ರವನ್ನು ನಿರ್ವಹಿಸುತ್ತಾರೆ.


ಈ ಚಿತ್ರವು ಭಾವನಾತ್ಮಕತೆಯಿಂದ ತುಂಬಿರುವ ಮತ್ತು ಸುಂದರವಾದ ದೃಶ್ಯ ಹಿನ್ನೆಲೆಯ ವಿರುದ್ಧ ಹೊಂದಿಸಲಾದ ಒಂದು ಪ್ರಣಯ ಕುಟುಂಬ ನಾಟಕವಾಗಿದ್ದು, ಇದು ಹೃದಯಸ್ಪರ್ಶಿ ಕಥೆ ಹೇಳುವಿಕೆಯನ್ನು ಅದ್ಭುತ ದೃಶ್ಯಗಳೊಂದಿಗೆ ಸಂಯೋಜಿಸುತ್ತದೆ.

ತಾಂತ್ರಿಕ ತಂಡದಲ್ಲಿ ಛಾಯಾಗ್ರಾಹಕ ವೆಂಕಟ್ ಪ್ರಸಾದ್ ಮತ್ತು ಸಂಯೋಜಕ ಹೇಶಮ್ ಅಬ್ದುಲ್ ವಹಾಬ್ ಇದ್ದಾರೆ. ವಿಜಯ್ ಈಶ್ವರ್ ಮತ್ತು ಕ್ರಾಂತಿ ಕುಮಾರ್ ಸಂಭಾಷಣೆ ಬರೆದಿದ್ದಾರೆ.



ಚಿತ್ರದ ಚಿತ್ರೀಕರಣ ಭರದಿಂದ ಸಾಗುತ್ತಿದ್ದು, 2025 ರಲ್ಲಿ ಗಣೇಶ್ ಬಿಡುಗಡೆಯಾಗದ ಕಾರಣ, ತಂಡವು 2026 ರ ಆರಂಭದಲ್ಲಿ ಬಿಡುಗಡೆ ಮಾಡುವ ಗುರಿಯನ್ನು ಹೊಂದಿದೆ.

ಏತನ್ಮಧ್ಯೆ, ಗಣೇಶ್ ವಿಖ್ಯಾತ್ ನಿರ್ದೇಶನದ ಯುವರ್ಸ್ ಸಿನ್ಸಿರ್ಲಿ ರಾಮ್ ಮತ್ತು ಧನಂಜಯ್ ಜೊತೆಗಿನ ಪಿನಾಕಾ ಸೇರಿದಂತೆ ಇತರ ಯೋಜನೆಗಳನ್ನು ನಿರ್ವಹಿಸುವುದನ್ನು ಮುಂದುವರೆಸಿದ್ದಾರೆ, ವೈವಿಧ್ಯಮಯ ಕಥೆ ಹೇಳುವಿಕೆಗೆ ಅವರ ಬಹುಮುಖತೆ ಮತ್ತು ಸಮರ್ಪಣೆಯನ್ನು ತೋರಿಸುತ್ತಿದ್ದಾರೆ.




## ಆರು ಭಾಷೆಗಳಲ್ಲಿ ಪ್ಯಾನ್-ಇಂಡಿಯಾ ಬಿಡುಗಡೆಗೆ ಸಿದ್ಧವಾಗಿರುವ ಕೊರಗಜ್ಜ

ಚಿತ್ರದ ಪ್ರಯಾಣ ಮೂರು ವರ್ಷಗಳ ಹಿಂದೆ ಪ್ರಾರಂಭವಾಯಿತು ಮತ್ತು ಹಲವಾರು ಸವಾಲುಗಳ ನಂತರ ಪೂರ್ಣಗೊಂಡಿತು ಎಂದು ನಿರ್ದೇಶಕ ಸುಧೀರ್ ಅತ್ತಾವರ್ ಹಂಚಿಕೊಂಡರು.

ಕಾಂತಾರ: ಅಧ್ಯಾಯ 1 ರ ನಂತರ , ಕರಾವಳಿ ಕರ್ನಾಟಕದ ಉತ್ಸಾಹ ಮತ್ತು ಸಂಪ್ರದಾಯದಲ್ಲಿ ಬೇರೂರಿರುವ ಮತ್ತೊಂದು ಚಿತ್ರ ಬಿಡುಗಡೆಗೆ ಸಜ್ಜಾಗುತ್ತಿದೆ. ಸಕ್ಸಸ್ ಫಿಲ್ಮ್ಸ್ ಮತ್ತು ತ್ರಿವಿಕ್ರಮ್ ಸಿನಿಮಾಸ್ ಅಡಿಯಲ್ಲಿ ತ್ರಿವಿಕ್ರಮ್ ಸಪಲ್ಯ ನಿರ್ಮಿಸಿರುವ ನಿರ್ದೇಶಕ ಸುಧೀರ್ ಅತ್ತಾವರ್ ಅವರ ಕೊರಗಜ್ಜ ಆರು ಭಾಷೆಗಳಲ್ಲಿ ಅದ್ದೂರಿಯಾಗಿ ಬಿಡುಗಡೆಯಾಗಲಿದ್ದು, ನವೆಂಬರ್ 28 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುವ ನಿರೀಕ್ಷೆಯಿದೆ.

ಕರಾವಳಿ ಕರ್ನಾಟಕದ ಸಾರವನ್ನು ಸುಂದರವಾಗಿ ಪ್ರತಿಬಿಂಬಿಸುವ ಅದ್ದೂರಿ ಕಾರ್ಯಕ್ರಮದಲ್ಲಿ ಚಿತ್ರದ ಫಸ್ಟ್ ಲುಕ್ ಟೀಸರ್ ಮತ್ತು 3ಡಿ ಮೋಷನ್ ಪೋಸ್ಟರ್ ಅನ್ನು ಇತ್ತೀಚೆಗೆ ಅನಾವರಣಗೊಳಿಸಲಾಯಿತು.

ದಕ್ಷಿಣ ಕನ್ನಡ ವಾದ್ಯ ಮೇಳ ಮತ್ತು ಉಡುಪಿಯ ಮಹಿಳಾ ಹುಲಿ ನೃತ್ಯ ತಂಡವನ್ನು ಒಳಗೊಂಡ ರೋಮಾಂಚಕ ಮೆರವಣಿಗೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಸಾಂಪ್ರದಾಯಿಕ ಡ್ರಮ್ಸ್, ಕೊಂಬುಗಳು ಮತ್ತು ಸಿಂಬಲ್‌ಗಳ ಲಯಬದ್ಧ ಬಡಿತಗಳ ನಡುವೆ ಕೊರಗಜ್ಜನ ಎರಡು ಬೃಹತ್ ಕಟೌಟ್‌ಗಳನ್ನು ಅನಾವರಣಗೊಳಿಸಲಾಯಿತು - ಇದು ಹಬ್ಬದ ಸ್ವರವನ್ನು ಸೃಷ್ಟಿಸಿತು. ಮಾಜಿ ಸಚಿವೆ ಮೋಟಮ್ಮ, ನಿರ್ಮಾಪಕ-ನಿರ್ದೇಶಕಿ ವಿಜಯಲಕ್ಷ್ಮಿ ಸಿಂಗ್, ನಿರ್ದೇಶಕ ಸುಧೀರ್ ಅತ್ತಾವರ್, ನಿರ್ಮಾಪಕ ತ್ರಿವಿಕ್ರಮ್ ಸಪಲ್ಯ ಮತ್ತು ಚಿತ್ರದ ಪಾತ್ರವರ್ಗ ಮತ್ತು ಸಿಬ್ಬಂದಿ ಸೇರಿದಂತೆ ಗಣ್ಯರು ಸಮಾರಂಭದಲ್ಲಿ ಪುಷ್ಪ ನಮನ ಸಲ್ಲಿಸಿದರು.

CMYK CMYK CMYK CMYK

# ಶಿಕ್ಷಕರ ನೈತಿಕತೆ, ಬದುಕಿನ ಮೌಲ್ಯಗಳಿಂದ ದೇಶದ ಅಭಿವೃದ್ಧಿ

## ಆದಿಚುಂಚನಗಿರಿ ಮಠದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ

• ಪ್ರಜೋದಯ ವರದಿ

**ಹಾಸನ:** ಯಾವುದಾದರೂ ಒಂದು ದೇಶದ ಪ್ರಗತಿಯನ್ನು, ಎತ್ತರವನ್ನು, ಅಭಿವೃದ್ಧಿಯನ್ನು ತಿಳಿದುಕೊಳ್ಳಬೇಕಾದರೆ ಆ ದೇಶದ ಶಿಕ್ಷಕರ ನೈತಿಕತೆ, ಬದುಕಿನ ಮೌಲ್ಯಗಳನ್ನು, ಗುಣ ಮಟ್ಟದ ಬೋಧನೆಯ ವ್ಯಕ್ತಿತ್ವ ವನ್ನು ತಿಳಿದುಕೊಂಡರೆ ಸಾಕು, ಆ ದೇಶದ ಅಭಿವೃದ್ಧಿಯನ್ನು ತಿಳಿದುಕೊಳ್ಳಬಹುದು ಎಂದು ಜಗದ್ಗುರು ಆದಿ ಚುಂಚನಗಿರಿ ಮಠದ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಅವರು ಹೇಳಿದರು.

ಜಿಲ್ಲಾ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟದ ವತಿಯಿಂದ ನಗರದ ಶ್ರೀ ಆದಿ ಚುಂಚನಗಿರಿ ಸಮುದಾಯ ಭವನ ದಲ್ಲಿ ಆಯೋಜಿಸಿದ್ದ ಸರ್ವಪಲ್ಲಿ ಡಾ.ರಾಧಾಕೃಷ್ಣನ್ ಅವರ ಜನ್ಮ ದಿನಾಚರಣೆ ಹಾಗೂ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಡಾ.ಸರ್ವಪಲ್ಲಿ ರಾಧಕೃಷ್ಣನ್ ಅವರ ವ್ಯಕ್ತಿತ್ವಕ್ಕೆ ಸರಿಸಾಟಿಯಾಗಬಲ್ಲ ವ್ಯಕ್ತಿತ್ವದ ಗುರುರಾಜ ಕರಜಗಿ ಅವರಂತಹ ವ್ಯಕ್ತಿಯನ್ನು ಕರೆಯಿಸಿ ಶಿಕ್ಷಕರ ದಿನಾಚರಣೆಯಲ್ಲಿ ಪ್ರಧಾನ ಭಾಷಣ ಮಾಡಿಸಿದ್ದು ಶ್ಲಾಘನೀಯ ಎಂದು ಹೇಳಿದ ಅವರು



ಕರುಣಾಳು ಬಾ ಬೆಳಕೆ ಎಂಬ ಅಂಕಣದ ಮೂಲಕ ನಾಡಿನ ಜನಮಾನಸವನ್ನು ಮುಟ್ಟಿ ಅವರಲ್ಲಿರುವ ಅಂಧಕಾರವನ್ನು ತೊಲಗಿಸಿ ಜ್ಞಾನದ ಬೆಳಕನ್ನು ತರುವಂತಹ ಕೆಲಸ ಮಾಡಿದ್ದಾರೆ ಎಂದು ವೇದಿಕೆಯಲ್ಲಿ ಉಪಸ್ಥಿತರಿದ್ದ ಗುರುರಾಜ ಕರಜಗಿಯವರ ಕುರಿತು ಹೇಳಿದ ಸ್ವಾಮೀಜಿಯವರು ಕರಜಗಿಯವರ ಪುಸ್ತಕಗಳು ಅಸಂಖ್ಯಾತ ಜನರ ಬದುಕಿಗೆ ದಾರಿದೀಪವಾಗಿವೆ ಎಂದು ತಿಳಿಸಿದರು.

ಖ್ಯಾತ ವಾಗ್ಮಿ ಪ್ರೊಫೆಸರ್ ಡಾ. ಗುರುರಾಜ ಕರಜಗಿಯವರು ಪರೀಕ್ಷೆಗಾಗಿ ಕಲಿಸಿದ್ದು ಪರೀಕ್ಷೆ ಮುಗಿದ ಕೆಲವೇ ತಿಂಗಳಲ್ಲಿ ಮರೆತು ಹೋಗುತ್ತದೆ. ಆದರೆ, ತರಗತಿಯಲ್ಲಿ ಶಿಕ್ಷಕರು ಕಲಿಸಿದ ಮೌಲ್ಯಗಳನ್ನು ವಿದ್ಯಾರ್ಥಿಗಳು ಎಂದಿಗೂ ಮರೆಯುವುದಿಲ್ಲ ಎಂದು ಹೇಳಿದ ಅವರು, ಕೃತಕ ಬುದ್ಧಿಮತ್ತೆಗಿಂತ ಸಹಜ ಬುದ್ಧಿಮತ್ತೆ ಸರ್ವಕಾಲಿಕ ಶ್ರೇಷ್ಠ, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಂದ ನಂತರ ಶಿಕ್ಷಕರ ಜವಾಬ್ದಾರಿ ಮತ್ತಷ್ಟೂ ಹೆಚ್ಚಾಗಿದೆ ಎಂದು ಡಾ.ಗುರುರಾಜ ಕರಜಗಿ ಅವರು ಹೇಳಿದರು.

ಶಿಕ್ಷಕರು ಕ್ರಿಯಾಶೀಲತೆಯಿಂದ ತಮ್ಮ ಕೆಲಸ ಮಾಡುತಿದ್ದರೇ ಯಾವುದೇ ತಂತ್ರಜ್ಞಾನ ನಿಮ್ಮ ಸ್ಥಾನ ತುಂಬಲು ಸಾಧ್ಯವಿಲ್ಲ. ನಾವು ವಿದ್ಯಾರ್ಥಿಗಳಿಗೆ ಕೊಡುವ ಶಿಕ್ಷೆ ಅವರಿಗೆ ಬದುಕಿನ ಮೌಲ್ಯಗಳನ್ನು ಕಲಿಸಿಕೊಡುವಂತಿರಬೇಕು, ಹುಟ್ಟಿನಿಂದ ಯಾವುದೇ ಮಗು ದಡ್ಡ ನಾಗಿರುವುದಿಲ್ಲ ಪ್ರತಿಯೊಂದು ಮಗುವಿನಲ್ಲೂ ಅದರದೇ ಆದ ವಿಶೇಷ ಪ್ರತಿಭೆ ಇರುತ್ತದೆ. ಅದನ್ನು ಅನಾವರಣ ಮಾಡಬೇಕಾದ ಸಹಜ ಬುದ್ಧಿ ಮತ್ತೆಯನ್ನು ಶಿಕ್ಷಕರು ಎಂದು ಡಾ.ಗುರುರಾಜ ಕರಜಗಿಯವರು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಡಳಿತದ ವತಿಯಿಂದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಜಿಲ್ಲೆಯ ವಿವಿಧ ತಾಲ್ಲೂಕಿನ ಅನುದಾನ ರಹಿತ ಶಾಲೆಗಳ ಶಿಕ್ಷಕರನ್ನು ಶ್ರೀಗಳು ಹಾಗೂ ಗಣ್ಯರು ಸನ್ಮಾನಿಸಿದರು. ಜಿಲ್ಲೆಯ ವಿವಿಧ ತಾಲ್ಲೂಕುಗಳ ಅನುದಾನ ರಹಿತ ಶಾಲೆಗಳಲ್ಲಿ ವ್ಯಾಸಂಗ ಮಾಡಿ ಎಸ್ ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಆಯಾ ತಾಲ್ಲೂಕಿನಲ್ಲಿ ಗರಿಷ್ಠ ಅಂಕ ದಾಖಲಿಸಿದ ರಾಜ್ಯ ಪಠ್ಯಕ್ರಮ, ಸಿಬಿಎಸ್ಸಿ, ಐಸಿಎಸ್ಸಿ ಶಾಲೆಗಳ ವಿದ್ಯಾರ್ಥಿಗಳನ್ನು ಗೌರವಿಸಿ ಅಭಿನಂದಿಸಲಾಯಿತು.

ಇದೇ ಸಂದರ್ಭದಲ್ಲಿ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ದಶಕಗಳಿಂದ ಸುಧೀರ್ಘ ಸೇವೆ ಸಲ್ಲಿಸುತ್ತಿರುವ ಅತ್ಯುತ್ತಮ ಶಾಲಾ ಆಡಳಿತ ಮಂಡಳಿಗಳಿಗೆ ವಿದ್ಯಾ ಪ್ರೇರಣಾಪ್ರಶಸ್ತಿ ಫಲಕ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಶ್ರೀ ಆದಿ ಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿಯವರು, ಶಾಸಕ ಸ್ವರೂಪ್ ಪ್ರಕಾಶ್, ಹಾಸನ ಜಿಲ್ಲಾ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟದ ಅಧ್ಯಕ್ಷ ಬಿ.ಇ ಶಿವರಾಮೇಗೌಡ, ಗೌರವ ಅಧ್ಯಕ್ಷ ಡಾ.ಹೆಚ್.ಎಸ್. ಅನಿಲ್‌ಕುಮಾರ್, ಕಾರ್ಯದರ್ಶಿ ಟೈಮ್ಸ್ ಗಂಗಾಧರ್, ಉಪಾಧ್ಯಕ್ಷೆ ತಾರ ಎಸ್.ಸ್ವಾಮಿ, ಶಾಸ್ತಾ ಪಬ್ಲಿಕ್ ಶಾಲೆಯ ವೆಂಕಟರಾಮು, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಬಲರಾಮ, ವಿವಿಧ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕಾಮ್ಸ್ ಕರ್ನಾಟಕದ ರಾಜ್ಯ ಪ್ರತಿನಿಧಿ ಪವನ್ ಮಂಜೇಗೌಡ, ಒಕ್ಕೂಟದ ಜಿಲ್ಲಾ ನಿರ್ದೇಶಕರುಗಳಾದ ಸಕಲೇಶಪುರದ ಮಲ್ನಾಡ್ ಝಾಕೀರ್, ಹಲಸುಲಿಗೆ ಗಿರೀಶ್, ಬೇಲೂರಿನ ಪ್ರಕಾಶ್, ರಂಗನಾಥ್, ಅರಕಲಗೂಡಿನ ಸುಬ್ಬರಾವ್, ಹೊಳೆನರಸೀಪುರದ ಅತೀಥ್, ಆಲೂರಿನ ಆನಂದ್, ಚನ್ನರಾಯ ಪಟ್ಟಣದ ಡಾ.ಭಾರತಿ ನಾಗೇಶ್, ಅರಸೀಕೆರೆಯ ಅನಂತ್‌ಕುಮಾರ್, ಹಾಸನದ ಹೆಚ್.ಡಿ.ಕುಮಾರ್, ವಿಜಯ ಶಾಲೆಯ ಶೈಕ್ಷಣಿಕ ಮುಖ್ಯಸ್ಥೆ ಡಾ.ಶ್ರೀ ಲಕ್ಷ್ಮೀ ಇದ್ದರು.

ಸಿಂಧೂ ಬುಕ್ ಹೌಸ್ ಸೇರಿದಂತೆ ವಿವಿಧ ಕಂಪನಿಗಳು ಶಿಕ್ಷಕರಿಗೆ ಪೂರಕವಾದ ವಿವಿಧ ಯೋಜನೆಗಳನ್ನು ಆಯೋಜಿಸುವ ಮೂಲಕ ನೆರೆದಿದ್ದವರ ಗಮನ ಸೆಳೆಯಿತು.

# ಇಂದಿನಿಂದ ಫಲಪುಷ್ಪ ಪ್ರದರ್ಶನ



• ಪ್ರಜೋದಯ ವರದಿ

ಹಾಸನ: ಶ್ರೀ ಹಾಸನಾಂಬ ದೇವಿ ದರ್ಶನ ಮತ್ತು ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವದ ಅಂಗವಾಗಿ ಅ.17 ರಿಂದ ಅ.20 ರವರೆಗೆ ಸಿಲ್ವರ್ ಜುಬಿಲಿ ಆರ್ಚರ್ಡ್ ಪಾರ್ಕ್‌ನಲ್ಲಿ ಫಲಪುಷ್ಪ ಪ್ರದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಅ.17 ರಂದು ಬೆ.11 ಗಂಟೆಗೆ ಸಿಲ್ವರ್ ಜುಬಿಲಿ ಆರ್ಚರ್ಡ್ ಪಾರ್ಕ್‌ನಲ್ಲಿ ಫಲಪುಷ್ಪ ಪ್ರದರ್ಶನ ಕಾರ್ಯಕ್ರಮ ಉದ್ಘಾಟನೆ ಮಾಡಲಾಗುತ್ತದೆ.

ಕಂದಾಯ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಫಲಪುಷ್ಪ ಪ್ರದರ್ಶನ ಉದ್ಘಾಟನೆ ಮಾಡಲಿದ್ದು ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಅವರು ಉಪಸ್ಥಿತಿ ವಹಿಸಲಿದ್ದಾರೆ.

ರಾಜ್ಯ ಗೃಹ ಮಂಡಳಿ ಅಧ್ಯಕ್ಷರು ಹಾಗೂ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಪುಷ್ಪ ಕಲಾಕೃತಿಗಳ ಉದ್ಘಾಟನೆ ಮಾಡಲಿದ್ದಾರೆ. ಶಾಸಕ ಸ್ವರೂಪ್ ಪ್ರಕಾಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಸಂಸದ ಶ್ರೇಯಸ್ ಎಂ.ಪಟೇಲ್ ಅವರು ಪ್ರದರ್ಶನಾ ಮಳಿಗೆಗಳ ಉದ್ಘಾಟನೆ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕರುಗಳಾದ ಹೆಚ್.ಡಿ.ರೇವಣ್ಣ, ಡಾ.ಸಿ.ಎನ್. ಬಾಲಕೃಷ್ಣ, ಎ.ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಶಾಸಕರುಗಳಾದ ಮಧು ಜಿ.ಮಾದೇಗೌಡ, ಕೆ.ವಿವೇಕಾನಂದ, ಡಾ|| ಸೂರಜ್ ರೇವಣ್ಣ ಹಾಗೂ ಮಹಾನಗರ ಪಾಲಿಕೆಯ ಮಹಾಪೌರರಾದ ಗಿರೀಶ್ ಚನ್ನವಿರಪ್ಪ ಅವರು ಭಾಗವಹಿಸಲಿದ್ದಾರೆ.

ಕ್ರೀಡಾ ಮತ್ತು ಯುವಜನ ಸಬಲೀಕರಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆಯ ಕಾರ್ಯದರ್ಶಿ ಡಾ.ಶಮ್ಲಾ ಇಕ್ಬಾಲ್ ಇನ್ನಿತರರು ಪಾಲ್ಗೊಳ್ಳುವರು

# ಆಧುನಿಕ ಜೀವನ ಶೈಲಿಯಿಂದ ಕಣ್ಣಿಗೆ ತೊಂದರೆ

• ಪ್ರಜೋದಯ ವರದಿ

**ಆಲೂರು:** ರಕ್ತದಲ್ಲಿ ಸಕ್ಕರೆ ಪ್ರಮಾಣ ಹೆಚ್ಚಾಗುತ್ತಾ ಹೋದಂತೆ ಕಣ್ಣುಗಳು ಮಂಜಾಗುವುದು ಸಹಜ ಎಂದು ಹಾಸನ ಅಮ್ಮ ಕಣ್ಣಿನ ಆಸ್ಪತ್ರೆ ಡಾ. ಸ್ಮಿತಾ ಅವರು ತಿಳಿಸಿದರು.

ಪಟ್ಟಣದಲ್ಲಿರುವ ಆಲೂರು ಕ್ಲಿನಿಕ್ ಆವರಣದಲ್ಲಿ ಏರ್ಪಡಿಸಲಾಗಿದ್ದ ಉಚಿತ ಕಣ್ಣು ತಪಾಸಣಾ ಮತ್ತು ಚಿಕಿತ್ಸಾ ಶಿಬಿರದಲ್ಲಿ ಮಾತನಾಡಿದ ಅವರು, ಕಣ್ಣು ಮನುಷ್ಯನ ಜೀವನಕ್ಕೆ ಅವಿಭಾಜ್ಯ ಅಂಗವಾಗಿದೆ ಎಂದರು.

ಸಾಮಾನ್ಯವಾಗಿ 40 ವಯಸ್ಸು ಕಳೆದ ನಂತರ ಕಣ್ಣು ದೃಷ್ಟಿಯಲ್ಲಿ ಮಂಕು ಕವಿಯುವುದು ಸಹಜ. ಇತ್ತೀಚೆಗೆ ಮನುಷ್ಯ ಆಧುನಿಕ ಶೈಲಿಯಲ್ಲಿ ತನ್ನ ಜೀವನ ಸಾಗಿಸುತ್ತಿರುವುದು, ರೆಡಿ ಮೇಡ್ ಆಹಾರ, ರಸ್ತೆ ಬದಿ ತಯಾರಿಸುವ ಆಹಾರ ಬಳಸುವುದರಿಂದ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಇದರಿಂದ ರಕ್ತದಲ್ಲಿ ಅಧಿಕ ಸಕ್ಕರೆ ಪ್ರಮಾಣ ವೃದ್ಧಿಸುವುದರಿಂದ ಕಣ್ಣಿನ ದೃಷ್ಟಿಯಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಪುಟ್ಟ ಮಕ್ಕಳು ಮೊಬೈಲ್ ಬಳಸುವುದರಿಂದ ಕಣ್ಣು ದೋಷಕ್ಕೀಡಾಗುತ್ತಿದ್ದಾರೆ. ಪೋಷಕರು ಸಾಧ್ಯವಾದಷ್ಟು ಮಕ್ಕಳು ಮೊಬೈಲ್ ಕಡಿಮೆ ಬಳಸುವಂತೆ ಜಾಗ್ರತೆ ವಹಿಸಬೇಕು ಎಂದು ಸಲಹೆ ನೀಡಿದರು.



ಡಾ. ಗಿರೀಶ್‌ಬಸಪ್ಪ ಅವರು ಮಾತನಾಡಿ, ಕಣ್ಣು ದೃಷ್ಟಿಯಲ್ಲಿ ದೋಷ ಉಂಟಾಗಲು ಹಲವು ಕಾರಣಗಳಿವೆ. ಸರಿಯಾಗಿ ದೃಷ್ಟಿ ಕಾಣಿಸದಿದ್ದರೆ ಒತ್ತಡದಿಂದ ನೋಡಲು ಪ್ರಯತ್ನ ಮಾಡಬಾರದು. ದೀರ್ಘಕಾಲದವರೆಗೆ ಪರದೆಯನ್ನು ನೋಡುವುದು, ಮಂದ ಬೆಳಕಿನಲ್ಲಿ ಓದುವುದು ಅಥವಾ ಅತಿಯಾದ ಕೆಲಸವು ಕಣ್ಣಿನ ಸ್ನಾಯುಗಳ ಮೇಲೆ ಒತ್ತಡವನ್ನು ಉಂಟು ಮಾಡುತ್ತದೆ. ಒತ್ತಡ ಹೆಚ್ಚಾದರೆ ತಲೆನೋವಿನ ಜೊತೆಗೆ ದೃಷ್ಟಿ ಮಂದವಾಗುತ್ತದೆ ಎಂದರು.

ಡಾ. ಕವಿತಾ ಗಿರೀಶ್, ದಾದಿಯರಾದ ಭವಾನಿ, ಪವಿತ್ರ, ತಾರಾಮಣಿ, ಪ್ರಿಯಾಂಕ, ಲಕ್ಷ್ಮಿ ಉಪಸ್ಥಿತರಿದ್ದರು.

# ಜಾತ್ರಾ ಪಾಕ ಸ್ಪರ್ಧೆಯಲ್ಲಿ ಹೆಚ್.ಸಿ.ಸುಜಾತ ಪ್ರಥಮ

**ಹಾಸನ:** ಶ್ರೀ ಹಾಸನಾಂಬ ದೇವಿ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸ ವ ಅಂಗವಾಗಿ ಸರ್ಕಾರಿ ವಿಜ್ಞಾನ ಕಾಲೇಜು ಮೈದಾನದ ಆವರಣದಲ್ಲಿ ಏರ್ಪಡಿಸಿದ್ದ ಪಾಕ ಸ್ಪರ್ಧೆಯಲ್ಲಿ ಹೆಚ್.ಸಿ. ಸುಜಾತ ಶಾಂತಿನಗರ, ಹಾಸನ ಇವರು ವಿಳ್ಯೆದೆಲೆ ಜ್ಯೂಸ್, ಕ್ಯಾರೇಟ್ ಪಾಯಸ, ಮೆಂತ್ಯ ಕೋಸಂಬರಿ ಅಡುಗೆ ತಯಾರಿಸಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಶಬನೂರು ಬಾನು ಇವರು ಎಳನೀರು ಜೆಲ್ಲಿ, ತರಕಾರಿ ಸ್ಯಾಂಡ್ವಿಚ್ ಅಡುಗೆ ತಯಾರಿಸಿ ದ್ವಿತೀಯ ಸ್ಥಾನ ಪಡೆದಿದ್ದರೆ, ಸುನಿತಾ ಹೆಚ್.ಪಿ ಕೊಟ್ಟೆ ಕಡಬು (ಸಿಹಿ ಖಾರ) ಅಡುಗೆ ತಯಾರಿಸಿ ತೃತೀಯ ಸ್ಥಾನ ಪಡೆದಿದ್ದಾರೆ.

ಯಶೋಧ ಚನ್ನರಾಯಪಟ್ಟಣ, ಶುಭ ಅರೆಹಳ್ಳಿ ಅವರು ವಿವಿಧ ರುಚಿಕರ ಅಡುಗೆ ಹಾಗೂ ಕಾಂತಮ್ಮ ಆಂದಲೆ, ಬೇಲೂರು ಇವರು ರಾಗಿ ಕಿಲ್ಲವನ್ನು ತಯಾರಿಸಿ ಸಮಾಧಾನಕರ ಬಹುಮಾನ ಪಡೆದಿದ್ದಾರೆ.

# ಒಂದು ಯೂನಿಟ್ ರಕ್ತದಾನದಿಂದ ನಾಲ್ವರ ಜೀವ ಉಳಿಸಬಹುದು

• ಪ್ರಜೋದಯ ವರದಿ

**ಹಾಸನ:** ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಹಾಸನ ಸರ್ಕಾರಿ ಇಂಜಿನಿಯರಿಗ್ ಕಾಲೇಜು ಹಾಸನ ಯುವ ರೆಡ್ ಕ್ರಾಸ್ ಘಟಕ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಐ.ಎಸ್.ಟಿ.ಇ ಇವರುಗಳ ಸಂಯುಕ್ತ ಆಶ್ರಯದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ರೆಡ್ ಕ್ರಾಸ್ ಸಂಸ್ಥೆಯ ಸಭಾಪತಿ ಹೆಮ್ಮಿಗೆ ಮೋಹನ್ ಅವರು ಮಾತನಾಡಿ, ರಾಷ್ಟ್ರೀಯ ಸ್ವಯಂ ಪ್ರೇರಿತ ರಕ್ತದಾನ ದಿನಾಚರಣೆಯನ್ನು ಅ. 1ನೇ ತಾರೀಖಿನಂದು ಡಾ.ಜೆ.ಜಿ ಜಾಲಿ ಅವರ ಹುಟ್ಟುಹಬ್ಬದ ಪ್ರಯುಕ್ತ ದೇಶದಲ್ಲಿ ಆಚರಣೆ ಮಾಡಲಾಗುತ್ತಿದೆ. ಜಾಲಿ ಅವರು ಹಣಕ್ಕಾಗಿ ರಕ್ತದಾನ ಮಾಡುವ ಪದ್ಧತಿಯನ್ನು ಸಂಪೂರ್ಣವಾಗಿ ತೊಡೆದು ಹಾಕಬೇಕೆಂಬ ಪ್ರಯತ್ನವನ್ನು ಮಾಡಿದ್ದರು ಹಾಗೂ ರಕ್ತ ವರ್ಗಾವಣೆ ಒಬ್ಬರಿಂದ ಒಬ್ಬರಿಗೆ ಮಾಡುವ ವಿಧಾನವನ್ನು ವೈಜ್ಞಾನಿಕವಾಗಿ ಅನುಷ್ಠಾನಕ್ಕೆ ತರಲು ಕಾರಣ ಕರ್ತರು. ಅವರನ್ನು ಭಾರತ ದೇಶದ ರಕ್ತಪೂರ್ಣ ಪಿತಾಮಹ ಎಂದು ಕರೆಯಲಾಯಿತು ಎಂದರು.



ಪ್ರತಿಯೊಂದು ರಕ್ತದಾನ ಶಿಬಿರದಲ್ಲಿ ಯುವ ಜನತೆಯು ಕೇಂದ್ರ ಬಿಂದುಗಳಾಗಿ ರಾಷ್ಟ್ರಮಟ್ಟದ ರಕ್ತದ ಬೇಡಿಕೆಯನ್ನು ಪೂರೈಸುವಲ್ಲಿ ಬಹು ದೊಡ್ಡ ಪಾತ್ರವನ್ನು ವಹಿಸಿಕೊಂಡಿದ್ದಾರೆ ಎಂದು ಪ್ರಶಂಸನೆ ಮಾಡಿದರು.

ಸಾಮಾನ್ಯ ಮನುಷ್ಯನ ದೇಹದಲ್ಲಿ ಸುಮಾರು 4.5 ಲೀಟರ್ ನಿಂದ 5.5 ಲೀಟರ್‌ವರೆಗಿನ ರಕ್ತದ ಪ್ರಮಾಣವಿದ್ದು, ಪ್ರತಿಯೊಬ್ಬರೂ ನೀಡುವ ಒಂದು ಯೂನಿಟ್ ಎಂದರೆ 450 ಮಿ.ಲಿ ರಕ್ತವನ್ನು ದಾನ ಮಾಡುವುದರಿಂದ ನಾಲ್ಕು ಜೀವಗಳನ್ನು ಉಳಿಸಲು ಸಾಧ್ಯ ಎಂದು ತಿಳಿಸಿದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆ ನಿರ್ದೇಶಕ ಎಸ್.ಎಸ್ ಪಾಷಾ ಅವರು ಮಾತನಾಡಿ, ರಕ್ತದಾನ ಜೀವನದ ಎಲ್ಲಾ ದಾನಕ್ಕಿಂತ ಅತ್ಯಂತ ಮಹಾದಾನವಾಗಿದ್ದು, ಪ್ರತಿಯೊಬ್ಬ ಆರೋಗ್ಯ ಯುವಕ ಯುವತಿಯರು ಕನಿಷ್ಠ ಮೂರು ತಿಂಗಳು ಹಾಗೂ ನಾಲ್ಕು ತಿಂಗಳಿಗೊಮ್ಮೆ ರಕ್ತದಾನ ಮಾಡುವುದರಿಂದ ದೇಹದ ಆರೋಗ್ಯ ವನ್ನು ಉತ್ತಮವಾಗಿ ಇಟ್ಟುಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಅಲ್ಲದೆ ರಸ್ತೆ ನಿಯಮಗಳನ್ನು ಪ್ರತಿಯೊಬ್ಬರು ಪಾಲಿಸಬೇಕು ಹಾಗೂ ಚಾಲಕರು ವಾಹನ ಚಾಲನೆಯ ಪರವಾನಿಗೆಯನ್ನು ಪಡೆದುಕೊಳ್ಳದೆ ವಾಹನ ಚಲಾಯಿಸಬಾರದು. ಇದರಿಂದಾಗುವ ತೊಂದರೆಗಳ ಬಗ್ಗೆ ವಿವರಿಸಿದರು.

ಸರ್ಕಾರಿ ರಕ್ತ ನಿಧಿ ಕೇಂದ್ರದ ಮುಖ್ಯಸ್ಥರಾದ ಡಾ. ನಾಗಲಕ್ಷ್ಮಿ ಅವರು ರಕ್ತದ ಪ್ರಯೋಜನದ ಬಗ್ಗೆ ಮಾತನಾಡಿದರು.

ಸಂಸದ ಶ್ರೇಯಸ್ ಎಂ. ಪಟೇಲ್ ಅವರು ರಕ್ತದಾನ ಕಾರ್ಯಕ್ರಮದ ಬಗ್ಗೆ ಹಾಗೂ ಭಾರತೀಯರ ರೆಡ್ ಕ್ರಾಸ್ ಸಂಸ್ಥೆ ಹಾಸನ ಶಾಖೆ ಮಾಡುತ್ತಿರುವ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆಯನ್ನು ತಿಳಿಸಿದರು. ಒಟ್ಟು 85 ಜನ ಯುವಕ-ಯುವತಿಯರು ರಕ್ತದಾನ ಮಾಡಿದರು.

ಡಾ. ಗಿರೀಶ್, ಶಬ್ಬೀರ್ ಅಹ್ಮದ್, ಜಯೇಂದ್ರ ಕುಮಾರ್, ಸುಬ್ಬಸ್ವಾಮಿ, ಸುರೇಶ್ , ಗಿರೀಶ್, ಭೀಮ್‌ರಾಜ್, ಕೃಷ್ಣ ಅಯ್ಯಂಗಾರ್, ಡಾ. ತಿಮ್ಮೇಶ್ ಎಲ್., ಡಾ. ತೀರ್ಥೇಗೌಡ, ಡಾ. ಬಸವರಾಜ್, ಡಾ.ನೀಲಪ್ಪ, ಡಾ. ಮನೋಜ್‌ಕೃಷ್ಣ ಹಾಗೂ ಡಾ.ವಾಣಿ ಇನ್ನಿತರರು ಹಾಜರಿದ್ದರು.

## ನಗರದಲ್ಲಿ ಇಂದಿನಿಂದ ಮೂರು ದಿನ
# ನಮ್ಮೂರ ಹಬ್ಬದ ಸಂಭ್ರಮ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಪ್ರಾದೇಶಿಕ ದಿನಪತ್ರಿಕೆ ಜನಮಿತ್ರ ಅರ್ಪಿಸುವ, ಡ್ರೀಮ್ಸ್ ಇಂಕ್ ಸಹಯೋಗದೊಂದಿಗೆ ಭೂಮಿಕಾ ವೆಂಚರ್ಸ್ ಯೋಜಿಸಿರುವ ನಮ್ಮೂರ ಹಬ್ಬ ಎಂಬ ಲೈಫ್ ಸ್ಟೈಲ್, ಆಟೋ ಮೊಬೈಲ್ ಹಾಗೂ ಫುಡ್ ಫೇರ್ ಮೆಗಾ ಶಾಂಪಿಂಗ್ ಎಕ್ಸ್ ಪೋ ಅ. 17, 18 ಮತ್ತು 19 ರಂದು ನಗರದ ಎಂಜಿ ರಸ್ತೆಯಲ್ಲಿರುವ ಅನ್ನಪೂರ್ಣೇಶ್ವರಿ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.

ಮೂರು ದಿನಗಳ ನವ ನವೀನ ಹಾಗೂ ವಿಭಿನ್ನ ಶೈಲಿಯ ಲೈಫ್ ಸ್ಟೈಲ್, ಆಟೋ ಮೊಬೈಲ್ ಹಾಗೂ ಫುಡ್ ಫೇರ್ ಮೆಗಾ ಶಾಂಪಿಂಗ್ ಎಕ್ಸ್ ಪೋ ದಲ್ಲಿ ಪ್ರೇಕ್ಷಕರು ಮತ್ತು ಗ್ರಾಹಕರನ್ನು ರಂಜಿಸಿರುವ ಆಕರ್ಷಕ ಮನರಂಜನಾ ಕಾರ್ಯಕ್ರಮಗಳೂ ಇರಲಿವೆ.

ಮೊದಲ ದಿನ ಅ.17 ರಂದು ಸಂಜೆ 4 ಗಂಟೆಯಿಂದ 7 ಗಂಟೆವರೆಗೆ 3-6 ಹಾಗೂ 7-10 ವರ್ಷದ ಮಕ್ಕಳಿಗೆ ದೇವರ ವೇಷ ಸ್ಪರ್ಧೆ ಏರ್ಪಡಿಸಲಾಗಿದೆ. ಸಂಜೆ 7 ಗಂಟೆಗೆ ಝೀ ಕನ್ನಡ ಸರಿಗಮಪ ಹಾಗೂ ಕಲರ್ಸ್




ಸೂಪರ್ ಕನ್ನಡ ಕೋಗಿಲೆ ಖ್ಯಾತಿಯ ಗಾಯಕರಾದ ನಿಶಾನ್ ರೈ ಮತ್ತು ಪೃಥ್ವಿ ಭಟ್ ಅವರ ಮ್ಯೂಸಿಕಲ್ ನೈಟ್ ಇದೆ.

ಮರು ದಿನ ಅ.18 ರಂದು ಸಂಜೆ 5.30 ರಿಂದ 6.30 ರವರೆಗೆ ಹಾಸನದ ಹೆಚ್‌ಜಿಎಸ್ ಕಲಾರಿ ಸಾಹಸ ದೃಶ್ಯ ವೈಭವ ಮೈ ನವಿರೇಳಿಸಲಿದೆ.

ಬಳಿಕ ಸಂಜೆ 6.30 ರಿಂದ ಅಮಿಶ್ ಮತ್ತು ದಿವ್ಯಾ ರಾಮಚಂದ್ರನ್ ಅವರಿಂದ ಮ್ಯೂಸಿಕ್ ನೈಟ್ ರಸಮಂಜರಿ ಕಾರ್ಯಕ್ರಮವಿದೆ.

ಅಂತಿಮ ದಿನವಾದ ಅ.19 ರಂದು ಭಾನುವಾರ ಸಂಜೆ 6 ಗಂಟೆಗೆ ವಿ 3 ಡ್ಯಾನ್ಸರ್ಸ್ ಮತ್ತು ತಂಡದವರಿಂದ ಅತ್ಯದ್ಭುತ ಮನರಂಜನಾ ಕಾರ್ಯಕ್ರಮಗಳಿವೆ.

ಮಿಸ್ ಮಾಡ್ದೇ ಬನ್ನಿ, ನಮ್ಮೂರ ಹಬ್ಬದಲ್ಲಿ ಭಾಗಿಯಾಗಿ ಆನಂದಿಸಿ, ಆಸ್ವಾದಿಸಿ, ಯಶಸ್ವಿಗೊಳಿಸಿ ಎಂದು ಆಯೋಜಕರು ಮನವಿ ಮಾಡಿದ್ದಾರೆ.

# ಅ.19 ರಂದು ಶ್ವಾನ ಪ್ರದರ್ಶನ

• ಪ್ರಜೋದಯ ವರದಿ

**ಹಾಸನ:** ಶ್ರೀ ಹಾಸನಾಂಬ ದೇವಿ ದರ್ಶನ ಹಾಗೂ ಸಿದ್ದೇಶ್ವರ ಸ್ವಾಮಿ ದೇವರ ಜಾತ್ರಾ ಮಹೋತ್ಸವದ ಅಂಗವಾಗಿ ಅ.19 ರಂದು ಸರ್ಕಾರಿ ವಿಜ್ಞಾನ ಕಾಲೇಜು, ಸಾಲಗಾಮೆ ರಸ್ತೆ, ಹಾಸನ ಇಲ್ಲಿ ಜಿಲ್ಲಾ ಮಟ್ಟದ ಶ್ವಾನ ಪ್ರದರ್ಶನವನ್ನು ಆಯೋಜಿಸಲಾಗಿರುತ್ತದೆ. ಶ್ವಾನ ಪ್ರದರ್ಶನದಲ್ಲಿ 2 ತಿಂಗಳ ವಯಸ್ಸಿನ ಮೇಲ್ಪಟ್ಟ ಯಾವುದೇ ತಳಿಯ ಶ್ವಾನಗಳು ಭಾಗವಹಿಸಬಹುದಾಗಿದೆ.

ಶ್ವಾನ ಪ್ರದರ್ಶನದಲ್ಲಿ ಭಾಗವಹಿಸಲು ನೊಂದಣಿ ಕಡ್ಡಾಯವಾಗಿದ್ದು, ಮಾಲೀಕರು ಹತ್ತಿರದ ಪಶುಚಿಕಿತ್ಸಾಲಯ ಪಶು ಆಸ್ಪತ್ರೆಗಳಿಗೆ ಭೇಟಿ ನೀಡಿ ಇಲ್ಲವೇ ಡಾ||ಕರುಣಾಕರ್ (ಮೊ:8970181196)-ಡಾ||ಜನಾರ್ಧನ್ (ಮೊ: 7259378441) ಡಾ||ದರ್ಶನ್ (ಮೊ: 8792794935) ಅವರುಗಳನ್ನು ಸಂಪರ್ಕಿಸಿ ಮುಂಚಿತವಾಗಿ ನೊಂದಣಿ ಮಾಡಿಸಿಕೊಳ್ಳಲು ಕೋರಿದೆ.

ನೊಂದಣಿ ಉಚಿತವಾಗಿದ್ದು, ಅ.18 ರ ಸಂಜೆ 5 ಗಂಟೆ ಒಳಗೆ ನೊಂದಣಿ ಮಾಡಿಸಿಕೊಳ್ಳಲು ಕೋರಿದೆ. ಪ್ರದರ್ಶನ ನಡೆಯುವ ಸ್ಥಳದಲ್ಲಿ ನೊಂದಣಿಗೆ ಅವಕಾಶವಿರುವುದಿಲ್ಲ.

ಹಾಸನ ಜಿಲ್ಲೆಯ ನಿವಾಸಿಗಳಿಗೆ ನೊಂದಣಿಯನ್ನು ಸೀಮಿತಗೊಳಿಸಿದೆ.

# ರಷ್ಯಾ ನಂತರ ಭಾರತ 3ನೇ ಅತಿ ಬಲಿಷ್ಠ ಸೇನೆ!

## ನಾಲ್ಕನೇ ಸ್ಥಾನಕ್ಕೆ ಕುಸಿದ ಚೀನಾ

• ಪ್ರಜೋದಯ ವರದಿ

**ನವದೆಹಲಿ:** ಜಾಗತಿಕ ಸೇನಾ ಬಲದಲ್ಲಿ ಭಾರತ ಚೀನಾವನ್ನು ಹಿಂದಿಕ್ಕಿ ಜಗತ್ತಿನ 3 ನೇ ಅತಿ ಬಲಿಷ್ಠ ಸೇನೆಯಾಗಿ ಹೊರಹೊಮ್ಮಿದೆ.

ವರ್ಲ್ಡ್ ಡೈರೆಕ್ಟರಿ ಆಫ್ ಮಾಡರ್ನ್ ಮಿಲಿಟರಿ ಏರ್‌ಕ್ರಾಫ್ಟ್ ಪ್ರಕಟಿಸಿದ ಇತ್ತೀಚಿನ ಶ್ರೇಯಾಂಕಗಳ ಪ್ರಕಾರ, ಭಾರತ ಅಧಿಕೃತವಾಗಿ ಚೀನಾವನ್ನು ಹಿಂದಿಕ್ಕಿ ವಿಶ್ವದ ಮೂರನೇ ಅತ್ಯಂತ ಶಕ್ತಿಶಾಲಿ ವಾಯುಪಡೆಯಾಗಿದೆ.

ಈ ಶ್ರೇಯಾಂಕಗಳ ಪ್ರಕಾರ ಯುಎಸ್ ವಾಯುಪಡೆ ಅಗ್ರಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ರಷ್ಯಾ ಇದ್ದು, ಈವರೆಗೂ ದೀರ್ಘಕಾಲದಿಂದ ಪ್ರಮುಖ ವಾಯುಸೇನಾ ಶಕ್ತಿ ಎಂದು ಪರಿಗಣಿಸಲ್ಪಟ್ಟ ಚೀನಾ ಈಗ ನಾಲ್ಕನೇ ಸ್ಥಾನಕ್ಕೆ ಕುಸಿದಿದೆ.

ಶ್ರೇಯಾಂಕದಲ್ಲಿನ ಭಾರತದ ಸ್ಥಾನ ಸುಧಾರಣೆ ಬೆಳೆಯುತ್ತಿರುವ ಫ್ಲೀಟ್ ಮತ್ತು ತಾಂತ್ರಿಕ ಸಾಮರ್ಥ್ಯಗಳನ್ನು ಮಾತ್ರವಲ್ಲದೆ ಅದರ ವಾಯುಪಡೆಯ ಕಾರ್ಯಾಚರಣೆಯ ಪರಿಣಾಮಕಾರಿತ್ವವನ್ನೂ ಪ್ರತಿಬಿಂಬಿಸುತ್ತದೆ. ಮೇ ತಿಂಗಳಲ್ಲಿ ಆಪರೇಷನ್ ಸಿಂಧೂರ್ ಸಮಯದಲ್ಲಿ ಭಾರತೀಯ ಪಡೆಗಳು ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ ಪ್ರಮುಖ ಮೂಲಸೌಕರ್ಯಗಳ ಮೇಲೆ ನಿಖರವಾದ ದಾಳಿಗಳನ್ನು ನಡೆಸಿದಾಗ, ಕಾರ್ಯತಂತ್ರದ ವ್ಯಾಪ್ತಿ ಮತ್ತು ಯುದ್ಧ ಸಿದ್ಧತೆಯನ್ನು ಪ್ರದರ್ಶಿಸಿದ್ದು ಗಮನಾರ್ಹ ಉದಾಹರಣೆಯಾಗಿ ಕಂಡು ಬಂದಿದೆ.



ಈ ಮೈಲಿಗಲ್ಲು ಪ್ರಾದೇಶಿಕ ಮತ್ತು ಜಾಗತಿಕ ವಾಯುಶಕ್ತಿ ಚಲನಶೀಲತೆಯಲ್ಲಿ ಭಾರತದ ವಿಸ್ತರಿಸುತ್ತಿರುವ ಪ್ರಭಾವವನ್ನು ಎತ್ತಿ ತೋರಿಸುತ್ತದೆ, ಇದು ದಕ್ಷಿಣ ಏಷ್ಯಾದ ಮಿಲಿಟರಿ ಸಾಮರ್ಥ್ಯಗಳಲ್ಲಿ ಹೊಸ ಅಧ್ಯಾಯವನ್ನು ಸೂಚಿಸುತ್ತದೆ.

ವರ್ಲ್ಡ್ ಡೈರೆಕ್ಟರಿ ಆಫ್ ಮಾಡರ್ನ್ ಮಿಲಿಟರಿ ಏರ್‌ಕ್ರಾಫ್ಟ್ ಶ್ರೇಯಾಂಕಗಳು 103 ದೇಶಗಳು ಮತ್ತು 129 ವಾಯು ಸೇವೆಗಳನ್ನು ಒಳಗೊಂಡಿವೆ - ಸೈನ್ಯ, ನೌಕಾಪಡೆ ಮತ್ತು ಸಮುದ್ರ ವಾಯುಯಾನ ಶಾಖೆಗಳು ಸೇರಿದಂತೆ - ಮತ್ತು ವಿಶ್ವಾದ್ಯಂತ ಒಟ್ಟು 48,082 ವಿಮಾನಗಳನ್ನು ಟ್ರ್ಯಾಕ್ ಮಾಡುತ್ತವೆ.

ಜಾಗತಿಕ ಮಿಲಿಟರಿ ಕಾರ್ಯತಂತ್ರದಲ್ಲಿ ವಾಯುಬಲ ನಿರ್ಣಾಯಕ ಅಂಶವಾಗಿ ಉಳಿದಿದೆ. ರಷ್ಯಾ, ಚೀನಾ, ಭಾರತ, ದಕ್ಷಿಣ ಕೊರಿಯಾ ಮತ್ತು ಜಪಾನ್‌ಗಳ ಸಂಯೋಜಿತ ನೌಕಾಪಡೆಗಳನ್ನು ಮೀರಿಸುವುದರೊಂದಿಗೆ ಯುನೈಟೆಡ್ ಸ್ಟೇಟ್ಸ್ ಮುನ್ನಡೆ ಸಾಧಿಸುತ್ತಲೇ ಇದೆ. ಜಾಗತಿಕ ಮಿಲಿಟರಿ ವೆಚ್ಚದ ಸುಮಾರು 40 ಪ್ರತಿಶತದಷ್ಟು ವೆಚ್ಚ ಯುನೈಟೆಡ್ ಸ್ಟೇಟ್ಸ್ ನಲ್ಲಿ ಕೇಂದ್ರೀಕೃತವಾಗಿರುವುದು ಈ ಪ್ರಾಬಲ್ಯಕ್ಕೆ ಕಾರಣವಾಗಿದೆ.

ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳ ನಡುವೆ ಭಾರತ ಮತ್ತು ಚೀನಾದಂತಹ ರಾಷ್ಟ್ರಗಳು ತಮ್ಮ ವಾಯುಪಡೆಗಳನ್ನು ವೇಗವಾಗಿ ಆಧುನೀಕರಿಸುತ್ತಿವೆ.

ಪ್ರಮುಖ ಜಾಗತಿಕ ಮುಕ್ತ-ಮೂಲ ರಕ್ಷಣಾ ಗುಪ್ತಚರ ಪೂರೈಕೆದಾರ ಜೇನ್ಸ್, ಜಾಗತಿಕ ರಕ್ಷಣಾ ವೆಚ್ಚವು ವರ್ಷದ ಅಂತ್ಯದ ವೇಳೆಗೆ ಶೇಕಡಾ 3.6 ರಷ್ಟು ಏರಿಕೆಯಾಗಬಹುದು ಮತ್ತು ಸುಮಾರು 2.56 ಟ್ರಿಲಿಯನ್ ತಲುಪಬಹುದು ಎಂದು ಅಂದಾಜಿಸಿದ್ದಾರೆ. ಈ ನಿರಂತರ ಬೆಳವಣಿಗೆಯು ವಿಶ್ವಾದ್ಯಂತ ತೀವ್ರವಾದ ಸಂಘರ್ಷಗಳು ಮತ್ತು ಕಾರ್ಯತಂತ್ರದ ಮರು ಜೋಡಣೆಗಳನ್ನು ಪ್ರತಿಬಿಂಬಿಸುತ್ತದೆ, ಆಧುನಿಕ ಯುದ್ಧ ಮತ್ತು ಅಂತರ ರಾಷ್ಟ್ರೀಯ ತಡೆಗಟ್ಟುವಿಕೆ ಎರಡರಲ್ಲೂ ವಾಯುಬಲದ ನಿರ್ಣಾಯಕ ಪಾತ್ರವನ್ನು ಒತ್ತಿ ಹೇಳುತ್ತದೆ.

# ಮನಿಷಾಗೆ ನಾಟ್ಯ ರಾಣಿ ಶಾಂತಲಾ ರಾಜ್ಯ ಪ್ರಶಸ್ತಿ



• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ನವೆಂಬರ್ 1 ರಂದು ಡೆಕ್ಕನ್ ವ್ಯಾಲಿ ಇಂಟರ್ ನ್ಯಾಷನಲ್ ಸ್ಕೂಲ್ ಲಿ ಏರ್ಪಡಿಸಿರುವ ದುದ್ದ ಹೋಬಳಿ ಚುಟುಕು ಸಾಹಿತ್ಯ ಪರಿಷತ್ ಘಟಕ ಉದ್ಘಾಟನೆ ಕಾರ್ಯಕ್ರಮ ಹಾಗೂ ಶಿವಲೀಲಾ ಚಲನಚಿತ್ರ ಪ್ರಮೋಷನ್ ಕಾರ್ಯಕ್ರಮದಲ್ಲಿ ಮನಿಷಾ ರಾಮಚಂದ್ರ ಅವರಿಗೆ ನಾಟ್ಯರಾಣಿ ಶಾಂತಲಾ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಮನಿಷಾ ರಾಮಚಂದ್ರ ಅವರು ಶ್ರೇಷ್ಠ ಕಥಕ್ ನೃತ್ಯ ಗುರುಗಳಾದ ಲಕ್ಷೀ ಹಾಗೂ ಸ್ವಾತಿ ಸಿನ್ಹ ಅವರಿಂದ ಕಥಕ್ ನೃತ್ಯ ಕಲಿತು ಸ್ನಾತಕೋತ್ತರ ಪದವೀಧರೆಯಾಗುವುದರೊಂದಿಗೆ ಮೆಕ್ಯಾನಿಕಲ್ ಎಂಜಿನಿಯರ್ ಪದವಿಯನ್ನು ಪಡೆದಿದ್ದಾರೆ.

## ಪಟಾಕಿಗಳ ಸಿಡಿತದಿಂದ ರಾಸಾಯನಿಕ ವಸ್ತುಗಳು ಬಿಡುಗಡೆಗೊಂಡು ವಾಯು ಮಾಲಿನ್ಯಕ್ಕೆ ಕಾರಣ

# ಪರಿಸರ ಮಾಲಿನ್ಯ: ಹಸಿರು ದೀಪಾವಳಿ ಆಚರಿಸಿ

• ಪ್ರಜೋದಯ ವರದಿ

**ಹಾಸನ:** ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪಟಾಕಿ ಸಿಡಿಸುವುದು ವಾಡಿಕೆಯಾಗಿರುತ್ತದೆ. ಪಟಾಕಿ ತಯಾರಿಕೆಯಲ್ಲಿ ಅನೇಕ ರಾಸಾಯಾನಿಕಗಳನ್ನು ಬಳಸಲಾಗುತ್ತದೆ. ಪಟಾಕಿಯಲ್ಲಿ ಬಳಸುವ ರಾಸಾಯಾನಿಕಗಳು ಸ್ಫೋಟ ಆಗುವ ಗುಣಗಳನ್ನು ಹೊಂದಿರುತ್ತದೆ. ಪಟಾಕಿ ಸಿಡಿಸಿದ ಮೇಲೆ ಅದರಿಂದ ಬಿಡುಗಡೆಯಾಗುವ ರಾಸಾಯಾನಿಕ ವಸ್ತುಗಳು ವಾತಾವರಣದಲ್ಲಿ ಬಿಡುಗಡೆಗೊಂಡು ವಾಯು ಮಾಲಿನ್ಯಕ್ಕೆ ಕಾರಣವಾಗುತ್ತದೆ. ಹಾಗಾಗಿ ಹಸಿರು ದೀಪಾವಳಿಯನ್ನಾಗಿ ಆಚರಿಸುವ ನಿಟ್ಟಿನಲ್ಲಿ ಸಾರ್ವಜನಿಕರು ಸಹಕರಿಸಬೇಕೆಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಹಬ್ಬದ ಸಂದರ್ಭದಲ್ಲಿ ಸಿಡಿಸುವ ಪಟಾಕಿಗಳು ಶಬ್ದ ಮಾಲಿನ್ಯ ಮತ್ತು ವಾಯು ಮಾಲಿನ್ಯವನ್ನು ಉಂಟು ಮಾಡಿ ಪರಿಸರಕ್ಕೆ ಹಾನಿ ಮಾಡುತ್ತಿದೆ ಹಾಗೂ ಜನರ ಆರೋಗ್ಯವನ್ನು ಹದಗೆಡಿಸುತ್ತಿದೆ ಮತ್ತು ಪ್ರಾಣಿ-ಪಕ್ಷಿಗಳ ಕಲರವಕ್ಕೆ ಘಾಸಿ ಉಂಟು ಮಾಡುತ್ತಿದೆ. ಆದ್ದರಿಂದ ದೀಪಾವಳಿ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಸರಳ ರೀತಿಯಲ್ಲಿ ಮಾಲಿನ್ಯ ರಹಿತವಾಗಿ ಮತ್ತು ಭಕ್ತಿ ಪೂರ್ವಕವಾಗಿ ಆಚರಿಸಬೇಕಾಗಿರುತ್ತದೆ.



ಆದರೆ ಇತ್ತೀಚಿನ ದಿನಗಳಲ್ಲಿ ಆಧುನಿಕ ಭರಾಟೆಯಲ್ಲಿ ಪಟಾಕಿಗಳನ್ನು ಸಿಡಿಸುವ ಮೂಲಕ ದೀಪಾವಳಿ ಹಬ್ಬವನ್ನು ಆಚರಿಸಲಾಗುತ್ತಿದೆ. ಈ ರೀತಿ ಪಟಾಕಿಗಳನ್ನು ಸಿಡಿಸುವುದರಿಂದ ವಾಯು ಮಾಲಿನ್ಯವು ಹೆಚ್ಚಾಗುವುದಲ್ಲದೇ ಹೆಚ್ಚಾದ ಶಬ್ದ ಮಾಲಿನ್ಯದಿಂದ ಮನುಷ್ಯನ ಮತ್ತು ಜೀವ ಸಂಕಲನದ ಆರೋಗ್ಯದ ಮೇಲೆ ತೀವ್ರ ಪರಿಣಾಮ ಉಂಟಾಗುತ್ತಿರುವುದು ದೇಶದಾದ್ಯಂತ ನಡೆಸಿದ ಅಧ್ಯಯನದಿಂದ ಸಾಬೀತಾಗಿದೆ. 2018ರ ಮಾನ್ಯ ರಾಷ್ಟ್ರೀಯ ಹಸಿರು ಪ್ರಾಧಿಕಾರದ ಆದೇಶದಂತೆ AS& KCCS ಇವರು ಶಿಫಾರಸ್ಸು ಮಾಡಿದ ಹಸಿರು ಪಟಾಕಿಗಳನ್ನು ಮಾತ್ರ ಉಪಯೋಗಿಸುವಂತೆ ಮಾನ್ಯ ಸರ್ವೋಚ್ಚ ನ್ಯಾಯಲಯವು ದಿ: 23.10.2018 ಮತ್ತು 31.10.2018 ಹಾಗೂ ತದನಂತರ ಹಲವಾರು ಸ್ಪಷ್ಟ ನಿರ್ದೇಶನಗಳನ್ನು ನೀಡಿರುತ್ತದೆ.

ಮುಂದುವರೆದಂತೆ, 2025ರ ದೀಪಾವಳಿ ಹಬ್ಬದ ದಿನಗಳಂದು ಪಟಾಕಿಗಳಿಂದಾಗುವ ಶಬ್ದ ಮತ್ತು ವಾಯು ಮಾಲಿನ್ಯವನ್ನು ನಿಯಂತ್ರಿಸಲು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಈ ಕೆಳಕಂಡಂತೆ ಕ್ರಮ ಜರುಗಿಸಲು ಸೂಚಿಸಲಾಗಿದೆ.



ಎಲ್ಲಾ ಹಸಿರು ಪಟಾಕಿಗಳ ಮೇಲೆ ಹಾಗೂ ಅವುಗಳ ಪ್ಯಾಕೆಟ್ ಮೇಲೆ ಹಸಿರು ಪಟಾಕಿಯ ಚಿಹ್ನೆಯು ಇರುತ್ತದೆ ಹಾಗೂ ಕ್ಯೂ.ಆರ್.ಕೋಡ್ ಸಹಾ ಇರುತ್ತದೆ, ಸದರಿ ಚಿಹ್ನೆಯ ಬಗ್ಗೆ ಸಂಬಂಧಪಟ್ಟ ಜಿಲ್ಲೆಯ ಅಧಿಕಾರಿಗಳಿಂದ ಖಚಿತ ಪಡಿಸಿಕೊಳ್ಳುವುದು. ಸದರಿ ಚಿಹ್ನೆ ಇಲ್ಲದ ಯಾವುದೇ ಪಟಾಕಿ ಹಸಿರು ಪಟಾಕಿಯೆನಿಸುವುದಿಲ್ಲ ಮತ್ತು ಅವುಗಳನ್ನು ಉಪಯೋಗಿಸಬಾರದು.

ದೀಪಾವಳಿ ಹಬ್ಬದ ಆಚರಣೆಯ ಸಂದರ್ಭದಲ್ಲಿ ಹಸಿರು ಪಟಾಕಿಗಳನ್ನು ಮಾತ್ರ ಬಳಸಬೇಕು ಹಾಗೂ ಅವುಗಳನ್ನು ಬಳಸುವಾಗ ಯಾವುದೇ ಪ್ರಾಣಿ, ಪಕ್ಷಿಗಳು, ಮಕ್ಕಳು ಹಾಗೂ ವೃದ್ಧರಿಗೆ ತೊಂದರೆಯಾಗದಂತೆ ಬಳಸಬೇಕು. ಯಾವುದೇ ಸ್ಥಳೀಯ ಆಸ್ಪತ್ರೆ ಹಾಗೂ ಶಿಕ್ಷಣ ಸಂಸ್ಥೆಗಳ ಸುತ್ತ ಮುತ್ತಲಿನ ಹಾಗೂ ಇನ್ನಾವುದೇ ನಿಷೇಧಿತ ಪ್ರದೇಶದಲ್ಲಿ ಯಾವುದೇ ರೀತಿಯ ಪಟಾಕಿಗಳನ್ನು ಸ್ಫೋಟಿಸುವಂತಿಲ್ಲ ಅಥವಾ ಬಳಸುವಂತಿಲ್ಲ.

ಹಸಿರು ಪಟಾಕಿಯನ್ನು ರಾತ್ರಿ 08 ಗಂಟೆಯಿಂದ 10 ವರೆಗೆ ಮಾತ್ರ ಸಿಡಿಸುವುದು. ಹಸಿರು ಪಟಾಕಿ ಅಂಗಡಿಗಳಲ್ಲಿ ಯಾವುದೇ ತರಹದ ಪ್ಲಾಸ್ಟಿಕ್ ಮತ್ತು ಪ್ಲಾಸ್ಟಿಕ್ ಬ್ಯಾಗ್‌ಗಳನ್ನು ಬಳಸುವಂತಿಲ್ಲ.

ದೀಪಾವಳಿ ಹಬ್ಬದ ಸಂದರ್ಭದಲ್ಲಿ 125ಡೆಸಿಬಲ್ ಗಿಂತ ಹೆಚ್ಚಿನ ಶಬ್ದ ಉಂಟು ಮಾಡುವ ಪಟಾಕಿಗಳನ್ನು ನಿಷೇಧಿಸಲಾಗಿದೆ. ದಿನದ ಯಾವುದೇ ಸಮಯದಲ್ಲಿ ನಿಶಬ್ಧವಲಯಗಳೆಂದು ಘೋಷಿಸಲ್ಪಟ್ಟಿರುವ ಸ್ಥಳಗಳಲ್ಲಿ (ಆಸ್ಪತ್ರೆ, ಶಾಲೆ, ಪ್ರಾರ್ಥನಾಮಂದಿರ ಇತ್ಯಾದಿಗಳು) ಸುತ್ತ ಮುತ್ತ ಯಾವುದೇ ರೀತಿಯ ಶಬ್ದ ಉಂಟು ಮಾಡುವ ಪಟಾಕಿ ಹಾಗೂ ಸಿಡಿಮದ್ದುಗಳ ಬಳಕೆಯನ್ನು ನಿಷೇಧಿಸಲಾಗಿದೆ ಎಂದು ತಿಳಿಸಿದ್ದಾರೆ.

# ಟಿಎಪಿಸಿಎಂಎಸ್ ಚುನಾವಣೆ: 6 ಮಂದಿ ಆಯ್ಕೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕು ಟಿಎಪಿಸಿಎಂಎಸ್‌ಗೆ ಅ.19ರಂದು ಚುನಾವಣೆ ನಿಗದಿಯಾಗಿದ್ದು, ಎ ಮತ್ತು ಬಿ ತರಗತಿ ವಿಭಾಗದಿಂದ ಚುನಾವಣೆ ನಿಗಧಿಯಾಗಿ, ಈಗಾಗಲೇ ಎ-ತರಗತಿಯಿಂದ ಜೆಡಿಎಸ್ ಬೆಂಬಲಿತ 6 ಮಂದಿ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿ ಜೆಡಿಎಸ್ ಪಕ್ಷದ ಪ್ರಾಬಲ್ಯ ಮೆರೆದಿದ್ದಾರೆ.

5 ವರ್ಷಗಳ ಅವಧಿಗೆ ತಾಲ್ಲೂಕು ವ್ಯವಸ್ಯಾಯೋತ್ಪನ್ನ ಮಾರಾಟ ಸಹಕಾರ ಮಹಾಮಂಡಳಕ್ಕೆ ಚುನಾವಣೆ ನಿಗದಿಯಾಗಿದ್ದು, ಇದಕ್ಕಾಗಿ 14ಸ್ಥಾನಗಳಿಗೆ ನಿರ್ದೇಶಕರ ಆಯ್ಕೆ ಪ್ರಕ್ರಿಯೆನ್ನು ಚುನಾವಣೆ ಮೂಲಕ ನಡೆಸಬೇಕಾಗಿದೆ. ಎ ಮತ್ತು ಬಿ ತರಗತಿ ವಿಭಾಗಗಳಲ್ಲಿ ನಡೆಯುವ ಚುನಾವಣೆಯಲ್ಲಿ ಎ ತರಗತಿಯಡಿ 6 ಮಂದಿ ಮತ್ತು ಬಿ ತರಗತಿಯಡಿ 8ಮಂದಿ ನಿದೇಶಕರಾಗಿ ಆಯ್ಕೆಯಾಗುತ್ತಾರೆ. ಎ ತರಗತಿಯಡಿ ಎಲ್ಲ 6 ಸ್ಥಾನಗಳು ಅವಿರೋಧವಾಗಿ ಆಯ್ಕೆಯಾಗಿದ್ದು, ಎಲ್ಲ 6 ಸ್ಥಾನಗಳು ಜೆಡಿಎಸ್ ಪಾಲಾಗಿವೆ.

ಎ ತರಗತಿಯಡಿ ಅರ್ಹತೆ ಹೊಂದಿರುವ ತಾಲ್ಲೂಕಿನ 40 ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದಡಿ ರಾಜ್ಯ ಮಾರಾಟ ಮಹಾಮಂಡಳದ ನಿರ್ದೇಶಕ ಸಿ.ಎನ್.ಪುಟ್ಟಸ್ವಾಮಿಗೌಡ, ವಕೀಲ ಬಿ.ಎನ್.ಬೋರೆಗೌಡ,



ಪರಮ ಕೃಷ್ಣೇಗೌಡ, ಹೆಚ್.ಆರ್. ವೆಂಕಟೇಶ್‌ಮೂರ್ತಿ, ತೋಟಿ ನಾಗರಾಜ್, ನೆಟ್ಟಿಕೆರೆ ನಾಗರಾಜ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬಿ ತರಗತಿಯಡಿಯ 8ಸ್ಥಾನಗಳ ಪೈಕಿ ಎಸ್‌ಟಿ ಮೀಸಲು ಕ್ಷೇತ್ರದ ಜೆಡಿಎಸ್ ಬೆಂಬಲಿತ ಉಮೇಶ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇನ್ನುಳಿದಂತೆ 7 ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದ್ದು, 16 ಮಂದಿ ಕಣದಲ್ಲಿದ್ದಾರೆ. 3559 ಷೇರುದಾರ ರೈತರು ಮತದಾನದ ಮೂಲಕ ನಿರ್ದೇಶಕರುಗಳನ್ನು ಆಯ್ಕೆ ಮಾಡಲಿದ್ದಾರೆ.

ಎ.ಚೋಳೇನಹಳ್ಳಿ ಪಿಎಸಿಸಿಎಸ್ ನಿಂದ ಅವಿರೋಧವಾಗಿ ಆಯ್ಕೆಯಾಗಿರುವ ರಾಜ್ಯ ಮಾರಾಟ ಮಹಾಮಂಡಳದ ನಿರ್ದೇಶಕ ಸಿ.ಎನ್.ಪುಟ್ಟಸ್ವಾಮೀಗೌಡ ಮಾತನಾಡಿ, ಮುಚ್ಚುವ ಸ್ಥಿತಿಯಲ್ಲಿದ್ದ ಚನ್ನರಾಯಪಟ್ಟಣ ಟಿಎಪಿಸಿಎಂಎಸ್ ನ ಆಡಳಿತವನ್ನು ಜೆಡಿಎಸ್ ಪಕ್ಷ ಕಳೆದೊಂದು ದಶಕದಿಂದ ಅಧಿಕಾರ ನಡೆಸಿ ಲಾಭದತ್ತ ಮುನ್ನಡೆಸಿದೆ. ಆದರ ಪರಿಣಾಮವಾಗಿ ಈಗಾಗಲೇ 14ಸ್ಥಾನಗಳ ಪೈಕಿ 7 ಸ್ಥಾನಗಳು ಅವಿರೋಧವಾಗಿ ಆಯ್ಕೆಯಾಗಿವೆ. ಉಳಿದ 7ಸ್ಥಾನಗಳಿಗೆ ನಮ್ಮ ಪಕ್ಷದ ಬೆಂಬಲಿತರಾದ ಸಾಮಾನ್ಯ ಕ್ಷೇತ್ರದಿಂದ ಎಂ.ಆರ್.ಅನಿಲ್‌ಕುಮಾರ್, ತರಬೇನಹಳ್ಳಿ ನಂಜುಂಡೇಗೌಡ, ಸಾಮಾನ್ಯ ಮಹಿಳಾ ಕ್ಷೇತ್ರದಿಂದ ತಾರಾಮಣಿ ಆನಂದ್, ಮಮತ ಜಯಣ್ಣ, ಬಿಸಿಎಂ ಬಿ ನಡಿ ಕುಂಬಾರಹಳ್ಳಿ ರಮೇಶ್, ಬಿಸಿಎಂ ಎ ನಿಂದ ಸಿ.ಜಿ.ಜಗದೀಶ್, ಮತ್ತು ಎಸ್‌ಸಿಯಡಿ ರವಿಕುಮಾರ್ ಸ್ಪರ್ಧಿಸಿದ್ದಾರೆ. ಈಗಾಗಲೇ 2ಸಾವಿರ ಮತದಾರರನ್ನು ಸಂಪರ್ಕಿಸಿ ಮತಪ್ರಚಾರ ನಡೆಸಲಾಗಿದೆ ಎಂದರು.

ಶಾಸಕ ಸಿ.ಎನ.ಬಾಲಕೃಷ್ಣ, ಹೆಚ್.ಡಿ.ರೇವಣ್ಣ ಮತ್ತು ಎಂಎಲ್ಸಿ ಡಾ. ಸೂರಜ್ ರೇವಣ್ಣನವರ ಸೂಚನೆ ಮೇರೆಗೆ ಪ್ರಚಾರ ಕೈಗೊಂಡಿದ್ದು, ಸಂಘದ ಅಭಿವೃದ್ದಿಯನ್ನು ಪರಿಗಣಿಸಿ ತಾಲ್ಲೂಕಿನ ಎಲ್ಲ ಮತದಾರರು ಪಕ್ಷದ 7ಮಂದಿಯನ್ನು ಗೆಲ್ಲಿಸುವ ಭರವಸೆ ಹೊಂದಿದ್ದೇವೆ ಎಂದರು.

# ಭಕ್ತರ ದರ್ಶನಕ್ಕೆ ಅವಕಾಶ ಕಲ್ಪಿಸಲು ಹರಸಾಹಸ

## ಕೆಲ ಕಾಲ ಟಿಕೆಟ್ ಮಾರಾಟ ಸ್ಥಗಿತ | ಧರ್ಮದರ್ಶನ ಪ್ರವೇಶ ದ್ವಾರವೇ ಬಂದ್

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ದೇವಿ ದರ್ಶನಕ್ಕೆ ಇನ್ನು ಆರು ದಿನಗಳು ಮಾತ್ರ ಬಾಕಿ ಇದ್ದು, ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ತಂಡೋಪ ತಂಡವಾಗಿ ಆಗಮಿಸುತ್ತಿದ್ದಾರೆ. ಜನರನ್ನು ನಿಯಂತ್ರಣ ಮಾಡಲಾಗದೆ ವಿಶೇಷ ದರ್ಶನದ ಟಿಕೆಟ್ ಮಾರಾಟ ಸ್ಥಗಿತ, ಪ್ರವೇಶ ದ್ವಾರವನ್ನೇ ಬಂದ್ ಮಾಡಿ ಹರಸಾಹಸ ಪಡಲಾಗುತ್ತಿದೆ.

ಸಾರ್ವಜನಿಕ ದರ್ಶನದ ಏಳನೇ ದಿನವಾದ ಗುರುವಾರ ನಿರೀಕ್ಷೆಗೂ ಮೀರಿ ಭಕ್ತರು ಆಗಮಿಸಿದ್ದರಿಂದ ಧರ್ಮ ದರ್ಶನದ ಸಾಲು ನಗರದ ಸೆಸ್ಕಾಂ ಕಚೇರಿವರೆಗೂ ತಲುಪಿತ್ತು. 300 ಹಾಗು 1000 ರೂ. ವಿಶೇಷ ದರ್ಶನದ ಸಾಲುಗಳು ಸಂಪೂರ್ಣ ಭರ್ತಿಯಾಗಿದ್ದವು. ವಿಶೇಷ ದರ್ಶನ ಟಿಕೆಟ್ ಪಡೆಯಲು ಭಕ್ತರು ಕಿಲೋ ಮೀಟರ್ ಸರದಿ ಸಾಲಿನಲ್ಲಿ ನಿಲ್ಲಬೇಕಾಯಿತು. ಶಿಷ್ಟಾಚಾರ ನಿಯಮದಡಿ ಗಣ್ಯರು ಆಗಮಿಸುತ್ತಿದ್ದುದರಿಂದ ಅವರೆಲ್ಲರೂ ಗರ್ಭಗುಡಿ ಪ್ರವೇಶ ಮಾಡುತ್ತಿದ್ದುದರಿಂದ ಈ ವೇಳೆ ಸಾರ್ವಜನಿಕ ದರ್ಶನಕ್ಕೆ ಅಡ್ಡಿಯಾಗಿತ್ತು. ಶಿಷ್ಟಾಚಾರ ವ್ಯವಸ್ಥೆಯಡಿ ಗಣ್ಯರು ಬರುವಾಗ ಸಾಮಾನ್ಯ ಸರದಿ ಸಾಲು ನಿಂತಲ್ಲೇ ನಿಲ್ಲಬೇಕಾಗಿತ್ತು.

ಭಕ್ತರೊಂದಿಗೆ ಗಣ್ಯರ ಸಂಖ್ಯೆಯೂ ಅಧಿಕವಾಗಿತ್ತು. ಹೈಕೋರ್ಟ್ ನ್ಯಾಯಮೂರ್ತಿಗಳು, ಲೋಕಾಯುಕ್ತರು, ದಾವಣಗೆರೆ ಸಂಸದೆ ಪ್ರಭಾ ಮಲ್ಲಿಕಾರ್ಜುನ್, ಕೆ.ಆರ್.ಪೇಟೆ ಶಾಸಕ ಮಂಜುನಾಥ್, ವಿಧಾನ ಪರಿಷತ್ ಸದಸ್ಯರಾದ ಭೋಜೇಗೌಡ, ಎಂ.ಕೆ.ಪ್ರಾಣೇಶ್, ಮಾಜಿ ಸಚಿವ ಸಿ.ಟಿ.ರವಿ, ಕರವೇ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷ ಡಾ.ಪುಷ್ಪ ಅಮರನಾಥ್, ಚಿತ್ರನಟಿ ನೀತು ಮೊದಲಾದವರು ಕುಟುಂಬ ಸಮೇತರಾಗಿ ಆಗಮಿಸಿ ಹಾಸನಾಂಬ, ಸಿದ್ದೇಶ್ವರಸ್ವಾಮಿ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಸಂಸದ ಶ್ರೇಯಸ್ ಪಟೇಲ್ ದಂಪತಿ ಅವಳಿ ಮಕ್ಕಳೊಂದಿಗೆ ಬಂದು ಹಾಸನಾಂಬ ದರ್ಶನ ಪಡೆದರು. ಈ ವೇಳೆ ಮಾತನಾಡಿದ ಅವರು, ಕಳೆದ ಬಾರಿ ದಂಪತಿ ದರ್ಶನಕ್ಕೆ ಬಂದಿದ್ದೆವು. ಈ ಬಾರಿ ನಾಲ್ಕು ಜನ ಬಂದಿದ್ದೇವೆ ಎಂದು ಖುಷಿ ವ್ಯಕ್ತಪಡಿಸಿದರು. ಇದಕ್ಕೂ ಮುನ್ನ ಪ್ರವಾಸಿ ಮಂದಿರದಿಂದ ಶಿಷ್ಟಾಚಾರ ವಾಹನದಲ್ಲೇ ಸಂಸದರು ಹಾಗು ಕುಟುಂಬ ಸದಸ್ಯರು ಆಗಮಿಸಿದರು.



### ಮುಂಜಾನೆವರೆಗೆ 11.30 ಲಕ್ಷ ಭಕ್ತರ ದರ್ಶನ

ಹಾಸನಾಂಬ ದರ್ಶನಕ್ಕೆ ಬುಧವಾರ ಒಂದೇ ದಿನ ಸುಮಾರು 2.46 ಲಕ್ಷ ಜನರು ಆಗಮಿಸಿ ದರ್ಶನ ಪಡೆದಿದ್ದಾರೆ. ಕಳೆದ 7 ದಿನದಲ್ಲಿ ಗುರುವಾರ ಮುಂಜಾನೆ 5 ಗಂಟೆವರೆಗೆ ಒಟ್ಟು 11.30 ಲಕ್ಷ ಜನರು ದೇವಾಲಯಕ್ಕೆ ಆಗಮಿಸಿದ್ದಾರೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಮಾಹಿತಿ ನೀಡಿದ್ದಾರೆ. ಬುಧವಾರ ದರ್ಶನ ಸಾಕಷ್ಟು ವೇಗವಾಗಿತ್ತು. ಗುರುವಾರ ಬೆಳಿಗ್ಗೆಯಿಂದಲೇ ಭಾರೀ ಜನ ಸಂದಣಿ ಉಂಟಾಗಿತ್ತು. ಜನರ ಸಾಲು ಧರ್ಮ ದರ್ಶನ ಮತ್ತು 300 ಟಿಕೆಟ್ ಎರಡೂ ಮಾರ್ಗ ಗಳು ಬ್ಯಾರಿಕೇಡ್ ಪ್ರದೇಶವನ್ನು ದಾಟಿ ಬೀದಿಗಳಿಗೆ ವಿಸ್ತರಿಸಿವೆ. ಜನರು ಹೆಚ್ಚುತ್ತಿರುವ ಹಿನ್ನೆಲೆ ಯಲ್ಲಿ ಧರ್ಮ ದರ್ಶನಕ್ಕೆ ಸುಮಾರು ಸಂಜೆ 4 ಗಂಟೆ ಆಚೆ-ಈಚೆವರೆಗೂ ಅಧಿಕ ಸಮಯ ತೆಗೆದುಕೊಳ್ಳುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ.

> **ದರ್ಶನಕ್ಕೆ ದಿನೇ ದಿನೇ ಭಕ್ತರ ಸಂದಣಿ ಹೆಚ್ಚಾಗುತ್ತಲೇ ಇದೆ. ಸಾಮಾನ್ಯವಾಗಿ, ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಎರಡು ಪಟ್ಟು ಜನಸಂದಣಿ ಹೆಚ್ಚಾಗಿದೆ. ಕಳೆದ ವರ್ಷ ದರ್ಶನಕ್ಕೆ 10-15 ಗಂಟೆಗಳು ಧರ್ಮ ದರ್ಶನದ ಸಾಲು ಪೂರ್ಣಗೊಳಿಸಬೇಕಾಗಿತ್ತು. ಈ ಬಾರಿ ನಾವು ಆ ಸಮಯವನ್ನು 4-5 ಗಂಟೆಗಳಿಗೆ ಇಳಿಸಿದ್ದೇವೆ. ಆದರೂ, ದುಪ್ಪಟ್ಟು ಜನ ಸಂದಣಿ ಇದೆ. ಹೀಗಾಗಿ ಭಕ್ತಾದಿಗಳು ಹೆಚ್ಚಿನ ಸಮಯಕ್ಕೆ ಸಿದ್ಧರಾಗಿ ಬರಬೇಕು.**
> **-ಕೃಷ್ಣಬೈರೇಗೌಡ,** ಜಿಲ್ಲಾ ಉಸ್ತುವಾರಿ ಸಚಿವ





## ದರ್ಶನ ಸಮಯದಲ್ಲಿ ಬದಲಾವಣೆ

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ದೇವಿ ಅಲಂಕಾರ ಮತ್ತು ಧಾರ್ಮಿಕ ವಿಧಿ ವಿಧಾನ ಕಾರ್ಯಕ್ಕಾಗಿ ಅ.18 ಮತ್ತು 21ರಂದು ದರ್ಶನದ ಸಮಯದಲ್ಲಿ ಕೊಂಚ ಬದಲಾವಣೆ ತರಲಾಗಿದೆ.

ಅ.18 ಮತ್ತು 21ರಂದು ಮುಂಜಾನೆ5ರಿಂದ ಮಧ್ಯಾಹ್ನ 2ರ ವರೆಗೆ ಹಾಗು ಮಧ್ಯಾಹ್ನ 3.30ರಿಂದ ರಾತ್ರಿ 12ರವರೆಗೆ ಮಾತ್ರ ದೇವಿ ದರ್ಶನ ಇರಲಿದೆ. ರಾತ್ರಿ 12 ರಿಂದ ಮುಂಜಾನೆ 5ರವರೆಗೆ ದರ್ಶನಕ್ಕೆ ಅವಕಾಶ ಇರುವುದಿಲ್ಲ. ಈ ದಿನಗಳಲ್ಲಿ 2 ಗಂಟೆ ಮುಂಚಿತವಾಗಿ ರಾತ್ರಿ 10 ಗಂಟೆಗೆ ಪ್ರವೇಶ ದ್ವಾರಗಳನ್ನು ಬಂದ್ ಮಾಡಲಾಗುತ್ತದೆ. ಉಳಿದ ದಿನಗಳಲ್ಲಿ ನೈವೇದ್ಯ ಸಮಯ ಹೊರತುಪಡಿಸಿ ದರ್ಶನ ದಿನಪೂರ್ತಿ ದರ್ಶನ ಇರಲಿದೆ.

## ಆರ್‌ಎಸ್‌ಎಸ್ ನಿಷೇಧ ಪ್ರಸ್ತಾಪವಾಗಿಲ್ಲ


• ಪ್ರಜೋದಯ ವರದಿ

**ಹಾಸನ:** ಆರ್‌ಎಸ್‌ಎಸ್ ನಿಷೇಧಿಸುವ ಬಗ್ಗೆ ಎಲ್ಲಿಯೂ ಪ್ರಸ್ತಾಪವಾಗಿಲ್ಲ. ಅದೆಲ್ಲ ಕೆಲವರ ಊಹೆಯ ಮಾತುಗಳಷ್ಟೇ. ಜನರಿಗೆ ತೊಂದರೆ ಕೊಡುವ ಸಂಘಟನೆಗಳನ್ನು ನಿರ್ಬಂಧಿಸುವ ಬಗ್ಗೆಯಷ್ಟೇ ಚರ್ಚೆಗಳಾಗುತ್ತಿದೆ ಎಂದು ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ಅಮರನಾಥ್ ಅವರು ಹೇಳಿದರು.

ಹಾಸನಾಂಬ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆರ್‌ಎಸ್‌ಎಸ್ ನಿಷೇಧ ಕುರಿತುಹಬ್ಬಿರುವುದು ಕೇವಲ ವದಂತಿ. ಈ ಬಗ್ಗೆ ನಮ್ಮ ಸರ್ಕಾರ ಎಲ್ಲಿಯೂ ಮಾತನಾಡಿಲ್ಲ. ಯಾವುದೇ ಸಂಘ ಸಂಸ್ಥೆಗಳಿಗೂ ಸರ್ಕಾರಿ ಜಾಗ ಬಳಕೆಗೆ ನಿಯಮ ಮತ್ತು ನಿಬಂಧನೆಗಳನ್ನು ಹೇರುವುದು ಅನಿವಾರ್ಯ ಎಂಬುದಷ್ಟೇ ನಮ್ಮ ನಿಲುವಾಗಿದೆ ಎಂದು ಹೇಳಿದರು.

ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ಬ್ಯಾನ್ ಎಂದು ಹೇಳಿಲ್ಲ, ಬದಲಾಗಿ ಯಾವುದೇ ಸಂಘ ಸಂಸ್ಥೆಗಳು ಸರ್ಕಾರಿ ಜಾಗದಲ್ಲಿ ಕಾರ್ಯಕ್ರಮ ಆಯೋಜಿಸಿದರೆ, ಅದರ ಮೇಲೆ ನಿಯಮ ಮತ್ತು ನಿಬಂಧನೆ ಗಳು ಇರಬೇಕೆಂದು ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಅದಕ್ಕಿಂತ ಹೆಚ್ಚು ಏನೂ ಹೇಳಿಲ್ಲ. ಮುಖ್ಯಮಂತ್ರಿ ಕೂಡ ಪಕ್ಕದ ರಾಜ್ಯದ ವರದಿ ಬರುವವರೆಗೆ ನಿರ್ಧಾರ ಕೈಗೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆಂದು ಹೇಳಿದರು.

ಹಾಸನಾಂಬ ದರ್ಶನಕ್ಕೆ ತಂಡೋಪ ತಂಡವಾಗಿ ಮಹಿಳೆಯರು ಆಗಮಿಸುತ್ತಿರುವುದು ಶಕ್ತಿ ಯೋಜನೆಯ ಫಲಿತಾಂಶ. ಉಚಿತ ಬಸ್ ಪ್ರಯಾಣದಿಂದ ಹೆಚ್ಚು ಮಹಿಳೆಯರು ದೇವಾಲ ಯಕ್ಕೆ ಆಗಮಿಸಿದ್ದಾರೆ. ಜಿಲ್ಲಾಡಳಿತ ಅತ್ಯುತ್ತಮ ವ್ಯವಸ್ಥೆ ಮಾಡಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರ ಪ್ರಾಮಾಣಿಕ ಪ್ರಯತ್ನದಿಂದ ದರ್ಶನೋತ್ಸವ ಯಶಸ್ವಿಯಾಗಿ ನತ್ತಸಾಗುತ್ತಿದೆ ಎಂದರು.



## ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡಿ ತಿಳುವಳಿಕೆ ಪಡೆಯಲಿ

### ಆರ್‌ಎಸ್‌ಎಸ್ ವಿರುದ್ಧ ಹೇಳಿಕೆಗೆ ಪ್ರಾಣೇಶ್ ಟೀಕೆ

• ಪ್ರಜೋದಯ ವರದಿ



**ಹಾಸನ:** ತಿಳುವಳಿಕೆ ಇಲ್ಲದ ಪ್ರಿಯಾಂಕ್ ಖರ್ಗೆ ಅವರು ಸಚಿವ ಸ್ಥಾನದಲ್ಲಿ ಮುಂದು ವರಿಯುವುದಕ್ಕಿಂತ ರಾಜೀನಾಮೆ ನೀಡಿ, ತಿಳುವಳಿಕೆ ಪಡೆದು ಪುನಃ ಮಂತ್ರಿಯಾ ಗುವುದು ಸೂಕ್ತ ಎಂದು ವಿಧಾನ ಪರಿಷತ್ ಉಪಸಭಾಪತಿ ಪ್ರಾಣೇಶ್ ಅವರು ಹೇಳಿದರು.

ಗುರುವಾರ ಹಾಸನಾಂಬ ದೇವಿ ದರ್ಶನ ಪಡೆದ ಬಳಿಕ, ಆರ್‌ಎಸ್‌ಎಸ್ ಚಟುವಟಿಕೆಯಲ್ಲಿ ಸರ್ಕಾರಿ ನೌಕರರು ಭಾಗವಹಿಸದಂತೆ ಸುತ್ತೋಲೆ ಹೊರಡಿಸಿ ಎಂದು ಸಚಿವ ಪ್ರಿಯಾಂಕ್ ಖರ್ಗೆ ಪತ್ರ ಬರೆದ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ತಿಳುವಳಿಕೆ ಇಲ್ಲದ ಮನುಷ್ಯರು ಮಾತನಾಡಿದ್ದಕ್ಕೆ ನಾವು ಉತ್ತರ ಕೊಡುವುದು ಸಮಂಜಸವಲ್ಲ. ಇಡೀ ದೇಶ, ಪ್ರಪಂಚದ ಒಳಗೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಎಂದರೆ ಎಲ್ಲರಿಗೂ ತಿಳಿದಿರುವ ವಿಚಾರ. ತಿಳಿದಿರುವ ವಿಚಾರಗಳನ್ನು ತಿಳುವಳಿಕೆ ಇಲ್ಲದಂತವರು ಮಾತನಾಡಿದಾಗ ಅದರ ಬಗ್ಗೆ ಏನೆಂದು ಉತ್ತರ ಕೊಡಬೇಕೆಂದು ಪ್ರಶ್ನಿಸಿದರು.

ಆರ್‌ಎಸ್‌ಎಸ್ ಇಂದು-ನಿನ್ನೆದೆಯಲ್ಲ 1925ರಲ್ಲಿ ಪ್ರಾರಂಭವಾಗಿದೆ. ಅವರು ಕಣ್ಣು ಬಿಡು ವುದಕ್ಕೆ ಮುಂಚೆ, ಅವರ ತಲೆಮಾರು, ಅವರ ಹಿಂದಿನ ತಲೆಮಾರಗಳು ಕೂಡ ಒಪ್ಪಿಕೊಂಡಿದ್ದಾರೆ. ಜವಾಹರ್‌ಲಾಲ್ ನೆಹರು, ಇಂದಿರಾಗಾಂಧಿ ಅವರು ಮೊದಲು ವಿರೋಧ ಮಾಡಿ ಪುನಃ ಒಪ್ಪಿಕೊಂಡಿದ್ದಾರೆ. ಗಣರಾಜ್ಯೋತ್ಸವದಲ್ಲಿ ಸಂಘಕ್ಕೆ ಪೆರೆಡ್ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ, ಇವೆಲ್ಲವೂ ಕಣ್ಣ ಮುಂದೆ ಇದೆ ಎಂದರು.

ಪ್ರಿಯಾಂಕ್ ಖರ್ಗೆ ಅವರು ರಾಜ್ಯ ನಡೆಸುವ ಸರ್ಕಾರದ ಉತ್ತಮ ಮಂತ್ರಿಯಾಗಿದ್ದರೆ, ತನ್ನ ನಡವಳಿಕೆಗಳು ಹೇಗೆ ಇರಬೇಕು, ನನ್ನ ಜ್ಞಾನ ಹೇಗಿರಬೇಕೆಂದು ತಿಳಿದುಕೊಳ್ಳಬೇಕು. ಒಬ್ಬ ಸರ್ಕಾರದ ಮಂತ್ರಿ, ಆರುವರೆ ಕೋಟಿ ಜನರನ್ನು ಪ್ರತಿನಿಧಿಸುವ 32 ಮಂತ್ರಿಗಳಲ್ಲಿ ಅವರು ಒಬ್ಬರು. ಮನುಷ್ಯನಿಗೆ ವಿದ್ಯಾಭ್ಯಾಸ ಅವಶ್ಯ. ಅವರಿಗೆ ವಿದ್ಯಾಭ್ಯಾಸದ ಕೊರತೆಯಿಂದ ಈ ಮಾತುಗಳನ್ನು ಆಡುತ್ತಿದ್ದಾರೆ. ಪ್ರಿಯಾಂಕ್ ಖರ್ಗೆ ಅವರು ಇನ್ನಾದರೂ ಪತ್ರ ಬರೆಯು ವುದು, ಮಾತನಾಡುವಾಗ ಅದರ ಹಿನ್ನೆಲೆ ಯನ್ನು ತಿಳಿಕೊಳ್ಳಬೇಕು. ಆರ್‌ಎಸ್‌ಎಸ್ ನಡೆದುಕೊಂಡು ಬಂದ ದಾರಿಯನ್ನು, ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡಿರುವ ವಿಚಾರಗಳನ್ನು ವಿಷಯಾಧಾರಿತವಾಗಿ ಮಾತನಾಡಿದರೆ ಸೂಕ್ತ, ಆಗ ಗೌರವವೂ ಬರುತ್ತದೆ ಎಂದು ಹೇಳಿದರು.

## ಭಕ್ತರೊಂದಿಗೆ ದೇವಿ ದರ್ಶನ ಪಡೆದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್

» **ಮೊದಲನೇ ಪುಟದಿಂದ**

ಈ ಬಾರಿ ಜಿಲ್ಲಾಡಳಿತ ಉತ್ತಮ ವ್ಯವಸ್ಥೆ ಮಾಡಿದೆ. ನಾನು ಉತ್ತರ ಕರ್ನಾಟಕದವಳಾದರೂ ಹಾಸನಾಂಬ ಮಹಾತ್ಮೆ ಕೇಳಿದ್ದೇನೆ. ವಿಶ್ವದಾದ್ಯಂತ ಹಾಸನಾಂಬಗೆ ಭಕ್ತರಿದ್ದಾರೆ. ಮಧ್ಯಾಹ್ನ 12 ಗಂಟೆ ನಂತರ ಬಂದರೆ ಶಿಷ್ಟಾಚಾರದ ವಾಹನಗಳಲ್ಲಿ ಕರೆದೊಯ್ಯಲು ಸಾಧ್ಯವಾಗುವುದಿಲ್ಲ, ಸಾವಿರ ರೂ. ಟಿಕೆಟ್ ಸಾಲಿನಲ್ಲಿ ತೆರಳಬೇಕಾಗುತ್ತದೆಂದು ಹೇಳಿದ್ದರು. ಹಾಸನಾಂಬ ತಾಯಿ ಎಷ್ಟು ಗಂಟೆಗೆ ಕರೆಸಿಕೊಳ್ಳುತ್ತಾಳೋ ಅಷ್ಟು ಗಂಟೆಗೆ ಬರುತ್ತೇನೆಂದು ಜಿಲ್ಲಾಧಿಕಾರಿಗೆ ಹೇಳಿದ್ದೆ. ದೇವಿ ಮುಂದೆ ಸಚಿವರು, ಸಾಮಾನ್ಯರು ಎಂಬ ತಾರತಮ್ಯ ಸರಿಯಲ್ಲ. ಸಾವಿರ ರೂಪಾಯಿ ಸಾಲಿನಲ್ಲಿ ಬಂದಿದ್ದೇನೆಂದರು. ಉತ್ತಮ ಮಳೆಯಾಗಿ ರೈತರು ಸಂತೋಷದಿಂದ ಇರಲಿ. ಬೆಳೆಗೆ ಒಳ್ಳೆಯ ಬೆಲೆ ದೊರೆಯಲಿ. ನಮ್ಮ ದೇಶದ ಮೇಲೆ ಯಾವುದೇ ಕರಿನೆರಳು ಬೀಳಬಾರದು. ಎಂದು ದೇವಿಯಲ್ಲಿ ಪ್ರಾರ್ಥಿಸಿದ್ದೇನೆಂದರು.



ಗೃಹಲಕ್ಷ್ಮೀ ಹಣ ಪಾವತಿ ಸಕಾಲಕ್ಕೆ ಆಗುತ್ತಿದೆ. ಜುಲೈ ತಿಂಗಳ ಹಣ ಮೂರ್ನಾಲ್ಕು ದಿನಗಳ ಹಿಂದೆ ಜಮೆಯಾಗಿದೆ. ಆಗಸ್ಟ್ ತಿಂಗಳ ಹಣ ದೀಪಾವಳಿ ಒಳಗೆ ಬಿಡುಗಡೆಯಾಗುತ್ತದೆಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ಅಭಿಷೇಕ್ ಶರ್ಮಾ, ಸ್ಮೃತಿಗೆ ಐಸಿಸಿ ತಿಂಗಳ ಪ್ರಶಸ್ತಿ

• ಪ್ರಜೋದಯ ವರದಿ

**ದುಬೈ:** ಭಾರತ ಟಿ-20 ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಮತ್ತು ಮಹಿಳಾ ತಂಡದ ಸ್ಮೃತಿ ಮಂದಾನ ಅವರಿಗೆ ಐಸಿಸಿ ತಿಂಗಳ ಆಟಗಾರ ಗೌರವ ಒಲಿದಿದೆ.

ಸೆಪ್ಟೆಂಬರ್ ತಿಂಗಳ ಶ್ರೇಷ್ಠ ಆಟಗಾರರ ಪ್ರಶಸ್ತಿ ಆಯ್ಕೆಯಲ್ಲಿ ಇವರಿಬ್ಬರಿಗೂ ಈ ಗೌರವ ಸಂದಿದೆ. ಅಭಿಷೇಕ್ ಅವರು ಈ ಪೈಪೋಟಿಯಲ್ಲಿ ತಮ್ಮ ಸಹ ಆಟಗಾರ, ಸ್ಪಿನ್ನರ್ ಕುಲದೀಪ್ ಯಾದವ್ ಮತ್ತು ಜಿಂಬಾಬ್ವೆಯ ಬ್ರಯನ್ ಬೆನೆಟ್ ಅವರನ್ನು ಹಿಂದಿಕ್ಕಿದರು. ಅಭಿಷೇಕ್ ಅವರು ಏಳು ಪಂದ್ಯಗಳಿಂದ 314 ರನ್ ಗಳಿಸಿದ್ದರು. 200ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ಈ ಸಾಧನೆ ಮಾಡಿದ್ದರು. 25 ವರ್ಷದ ಅಭಿಷೇಕ್ ಅವರು ಈಚೆಗೆ ಏಷ್ಯಾ ಕಪ್ ಟೂರ್ನಿಯಲ್ಲಿ ಸರಣಿಶ್ರೇಷ್ಠ ಪ್ರಶಸ್ತಿ ಪಡೆದಿದ್ದರು.

ಈ ಗೌರವಕ್ಕೆ ಪಾತ್ರರಾಗಿದ್ದು ಬಹಳ ಹೆಮ್ಮೆ ಎನಿಸುತ್ತಿದೆ. ಕೆಲವು ಮಹತ್ವದ ಪಂದ್ಯಗಳಲ್ಲಿ ತಂಡದ ಗೆಲುವಿನಲ್ಲಿ ಪಾತ್ರ ವಹಿಸಿದ್ದು ತೃಪ್ತಿಕರವಾಗಿದೆ ಎಂದು ಅಭಿಷೇಕ್ ಹೇಳಿದರು.

ಮಹಿಳಾ ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್ ಸ್ಮೃತಿ ಅವರು ಭಾರತದಲ್ಲಿ ಆಸ್ಟ್ರೇಲಿಯಾ ವಿರುದ್ಧ ನಡೆದಿದ್ದ ಏಕದಿನ ಸರಣಿಯ ಮೂರು ಪಂದ್ಯಗಳಲ್ಲಿ ಕ್ರಮವಾಗಿ 58, 117 ಮತ್ತು 125 ರನ್ ಗಳಿಸಿದ್ದರು. ತಂಡದ ಉಪನಾಯಕಿಯೂ ಆಗಿರುವ ಸ್ಮೃತಿ ಒಟ್ಟು 308 ರನ್ ಸೇರಿಸಿದರು. 135.68ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಕಲೆಹಾಕಿದ್ದರು.

## ರಾತ್ರಿ 10 ಗಂಟೆಗೆ ದರ್ಶನದ ಪ್ರವೇಶ ದ್ವಾರ ಬಂದ್

• ಮೊದಲನೇ ಪುಟದಿಂದ

ಗುರುವಾರದಿಂದ ಶನಿವಾರ ದವರೆಗೆ ರಾತ್ರಿ 12 ಗಂಟೆಯಿಂದ ಮುಂಜಾನೆ 5 ಗಂಟೆವರೆಗೆ ದರ್ಶನ ಇರುವುದಿಲ್ಲ. ಅ.19 ರಿಂದ 22ರವರೆಗೆ ನೈವೇದ್ಯ ಸಮಯ ಹೊರತುಪಡಿಸಿ ದರ್ಶನಕ್ಕೆ ಅವಕಾಶ ಕಲ್ಪಿಸಿಕೊಡಲಾಗು ವುದು. ಭಕ್ತರು ಅನಗತ್ಯವಾಗಿ ಸರದಿ ಸಾಲಿನಲ್ಲಿ ಕಾಯುವುದನ್ನು ತಪ್ಪಿಸಲು ಈ ಮಾಹಿತಿ ನೀಡಲಾಗುತ್ತಿದೆ ಎಂದರು.

**ಭಕ್ತರ ನಿಯಂತ್ರಣಕ್ಕೆ ಹರಸಾಹಸ**

ದರ್ಶನಕ್ಕೆ ಭಕ್ತರ ಆಗಮನ ನಿರೀಕ್ಷೆಗೂ ಮೀರಿ ಹೆಚ್ಚಾಗಿದ್ದ ಹಿನ್ನಲೆ ಜಿಲ್ಲಾಧಿಕಾರಿ ಲತಾಕುಮಾರಿ ಅವರೇ ಭಕ್ತರ ನಿಯಂತ್ರಣಕ್ಕೆ ನಿಂತಿದ್ದರು. ಭಕ್ತರನ್ನು ನಿಯಂತ್ರಿಸಲು ಅಧಿಕಾರಿ ಗಳು, ಪೊಲೀಸರು ಹರಸಾಹಸ ಪಡುವಂತಾಗಿದೆ. ಭಕ್ತರಿಗೆ ಹಾಸನಾಂಬ ದೇವಿ ಸುಗಮ ದರ್ಶನ ಮಾಡಿಸಲು ಜಿಲ್ಲಾಧಿಕಾರಿಯೇ ಮುಂದಾಗಿದ್ದಾರೆ. ದೇವಾಲಯದ ಮುಂಭಾಗ ನಿಂತು ಮೈಕ್‌ನಲ್ಲಿ ಅನೌನ್ಸ್ ಮಾಡಿ, ದೇವ ಸ್ಥಾನ ಬಾಗಿಲು ಬಳಿಯಿಂದಲೇ ದೇವರನ್ನು ನೋಡುತ್ತಾ ಹೋಗಿ, ಯಾರೂ ನಿಲ್ಲಬೇಡಿ, ಭಕ್ತರ ಸಂಖ್ಯೆ ಜಾಸ್ತಿ ಇದೆ. ಒಬ್ಬರು ನಿಂತರೆ ಎಲ್ಲರಿಗೂ ತೊಂದರೆ ಆಗುತ್ತದೆ. ಬೇಗ ಬೇಗ ಹೋಗಿ ದೇವರ ದರ್ಶನ ಪಡೆಯಿರಿ ಎಂದು ಕೋರಿಕೊಂಡರು. ಭಕ್ತರ ಸಂಖ್ಯೆ ಹೆಚ್ಚಾದ ಹಿನ್ನಲೆ ಸಿದ್ದೇಶ್ವರಸ್ವಾಮಿ ದೇವಾಲಯದ ಎದುರಿನ ಬಾಗಿಲನ್ನು ಕೆಲಹೊತ್ತು ಬಂದ್ ಮಾಡಲಾಗಿತ್ತು. ಈ ವೇಳೆ ಜಮಾಯಿ ಸಿದ್ದ ಭಕ್ತರು, ದಯಮಾಡಿ ಬಾಗಿಲು ತೆರೆಯಿರಿ ಎಂದು ಜಿಲ್ಲಾಧಿ ಕಾರಿಗೆ ಮನವಿ ಮಾಡಿದರು. ನಂತರ ಸಿದ್ದೇ ಶ್ವರಸ್ವಾಮಿ ದೇವಾಲಯದ ಬಾಗಿಲು ತೆರೆಸಿ, ದರ್ಶನಕ್ಕೆ ಅವಕಾಶ ನೀಡಲಾಯಿತು.

### ಆರ್‌ಎಸ್‌ಎಸ್ ಬಗ್ಗೆ ಪೂರ್ವಾಗ್ರಹ ಮನೋಭಾವ ಬೇಡ

» **ಮೊದಲನೇ ಪುಟದಿಂದ**

ಆರ್‌ಎಸ್‌ಎಸ್ ಎಂದರೆ ಶಿಸ್ತು, ದೇಶ ಪ್ರೇಮ, ರಾಷ್ಟ್ರಭಕ್ತಿ, ಇಡೀ ಸಮಾಜವನ್ನು ಒಟ್ಟು ಮಾಡುವ ಸಂಘಟನೆ. ಯಾರನ್ನೋ ಖುಷಿಪಡಿ ಸಲು, ಮತ ರಾಜಕಾರಣಕ್ಕಾಗಿ ರಾಜ್ಯ ಸರ್ಕಾರ ಆರ್‌ಎಸ್‌ಎಸ್ ನಿಷೇಧಿಸುವ ಕುರಿತು ಹೇಳಿಕೆ ನೀಡುತ್ತಿದೆ. ಆದರೆ ಇದ್ಯಾವುದು ಈಡೇರು ವುದಿಲ್ಲವೆಂದರು.

**ನೀವು ಶಾಖೆಗೆ ಬಂದು ನೋಡಿ**

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕುರಿತು ಹಗುರವಾಗಿ ಮಾತನಾಡುವವರು ಒಂದು ಬಾರಿ ಶಾಖೆಗೆ ಭೇಟಿ ನೀಡಬೇಕು. ಸಂಘದ ಕಾರ್ಯಕ್ರಮಗಳಿಗೆ ಹಾಜರಾದರೆ ಅಲ್ಲಿ ಏನೇನು ನಡೆಯುತ್ತದೆಂಬುದು ಅರಿವಿಗೆ ಬರುತ್ತದೆ. ಕೇವಲ ನಮ್ಮ ಕಾರ್ಯಕರ್ತರು ಮಾತ್ರವಲ್ಲ ಸಾಮಾನ್ಯ ಜನರು ಸಂಘಟನೆಯನ್ನು ಒಪ್ಪಿಕೊಳ್ಳುತ್ತಿದ್ದಾರೆಂದರು.

## ಪ್ರಿಯಾಂಕ್ ಖರ್ಗೆ ಅಪಪ್ರಚಾರ ಮನಸ್ಥಿತಿ ಬದಲಿಸಿಕೊಳ್ಳಲಿ

» **ಮೊದಲನೇ ಪುಟದಿಂದ**

ಮಾಡುತ್ತಿರಲಿಲ್ಲ ಎಂದರು.

**ಸಿದ್ದೇಶ್ವರಸ್ವಾಮಿ ದರ್ಶನಕ್ಕೆ ಅವಕಾಶ ನೀಡಲಿ**

ಸಿದ್ದೇಶ್ವರಸ್ವಾಮಿ ದರ್ಶನ ಮಾಡಲು ಅವಕಾಶ ಕೊಡುತ್ತಿಲ್ಲ ಎಂದು ಭಕ್ತರು ಹೇಳುತ್ತಿದ್ದಾರೆ. ಹಾಸನಾಂಬ ದೇವಿ ದರ್ಶನ ಮಾಡಿ ಸಿದ್ದೇಶ್ವರಸ್ವಾಮಿ ದರ್ಶನ ಮಾಡಿದ ಮೇಲೆ ನಮ್ಮ ದರ್ಶನ ಪರಿಪೂರ್ಣವಾಗುತ್ತದೆ. ಇಷ್ಟೆಲ್ಲಾ ವ್ಯವಸ್ಥೆ ಮಾಡಿದ್ದಾರೆ, ಅದಕ್ಕೂ ಪೂರಕ ವ್ಯವಸ್ಥೆ ಮಾಡಬೇಕು. ಈ ಬಗ್ಗೆ ಜಿಲ್ಲಾಧಿಕಾರಿ ಜೊತೆ ಮಾತನಾಡುತ್ತೇನೆ. ಕನಿಷ್ಠ ದರ್ಶನಕ್ಕಾದರೂ ವ್ಯವಸ್ಥೆ ಮಾಡ ಬೇಕೆಂದು ಹೇಳಿದರು.

ಹಾಸನಾಂಬ ದರ್ಶನಕ್ಕೆ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡುವ ಯತ್ನ ಮಾಡಿದ್ದಾರೆ. ಧರ್ಮ ದರ್ಶನ ಮತ್ತಷ್ಟು ಸುಧಾರಿಸುವ ಕೆಲಸ ಆಗಬೇಕಿದೆ. ಅದಕ್ಕಾಗಿ ಜಿಲ್ಲಾಡಳಿತ ಹಾಗು ಉಸ್ತುವಾರಿ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ಮಂಜು ಮತ್ತಿತರರು ಹಾಜರಿದ್ದರು.

## ಕಾರು ಡಿಕ್ಕಿ: ಪಾದಾಚಾರಿ ಸಾವು

• ಪ್ರಜೋದಯ ವರದಿ

**ಹಾಸನ:** ಕಾರು ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಕಾರೆಕೆರೆ ಕೃಷಿ ಮಹಾವಿದ್ಯಾಲಯ ಸಮೀಪ ನಡೆದಿದೆ.

ಹಳೇಕೋಟೆ ಹೋಬಳಿ ಹರಿಹರಪುರ ಗ್ರಾಮದ ಸುರೇಶ (55) ಮೃತರು. ಕೃಷಿ ಕಾಲೇಜು ಹಾಸ್ಟೆಲ್‌ನಲ್ಲಿ ಅಡುಗೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದ ಸುರೇಶ ಬುಧವಾರ ಉದಯಪುರಕ್ಕೆ ಹೋಗಲು ರಸ್ತೆಯ ಎಡಬದಿಗೆ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದಾಗ ಹಾಸನ ಕಡೆಯಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ತೀವ್ರ ರಕ್ತಸ್ರಾವವಾದ ಹಿನ್ನಲೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಶಾಂತಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಪತ್ನಿ ಚಿಕಿತ್ಸೆಗಾಗಿ ಸಾಲದ ಹಣ ಕಳವು

• ಪ್ರಜೋದಯ ವರದಿ

**ಸಕಲೇಶಪುರ:** ಮನೆಯ ಛಾವಣಿಗೆ ಅಳವಡಿಸಿದ್ದ ಹೆಂಚುಗಳನ್ನು ತೆಗೆದು ಒಳನುಗ್ಗಿರುವ ಕಳ್ಳರು ಚಿಕಿತ್ಸೆಗಾಗಿ ಸಾಲ ಪಡೆದಿದ್ದ ನಗದು ಸೇರಿ 6.42 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ಮಂಜೇನಹಳ್ಳಿಯಲ್ಲಿ ನಡೆದಿದೆ.

ಸುಬ್ಬರಾಯಿಗೌಡ ಎಂಬುವವರ ಮನೆಯಲ್ಲಿ ಅ.8 ರಿಂದ 15ರ ಅವಧಿಯಲ್ಲಿ ಕಳ್ಳತನ ನಡೆದಿದೆ. ಸುಬ್ಬರಾಯಿಗೌಡ ಅವರ ಪತ್ನಿಗೆ ಹೃದಯ ಸಂಬಂಧಿ ಕಾಯಿಲೆಯಿದ್ದು ಒಂದು ವಾರಗಳ ಕಾಲ ಆಸ್ಪತ್ರೆಯಲ್ಲೇ ಇದ್ದರು. ಚಿಕಿತ್ಸಾ ವೆಚ್ಚ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದ ಹಿನ್ನಲೆ ಯಲ್ಲಿ ಸಂಬಂಧಿಕರು ಹಾಗು ಸ್ನೇಹಿತರಿಂದ 3.50 ಲಕ್ಷ ರೂಪಾಯಿ ಸಾಲ ಪಡೆದು ಮನೆಯಲ್ಲಿಟ್ಟಿದ್ದರು.

ಅ.8 ರಂದು ಮನೆಗೆ ಬೀಗ ಹಾಕಿ ಹಾಸನದ ಆಸ್ಪತ್ರೆಗೆ ಬಂದಿದ್ದರು. ವೈದ್ಯರು ಮೈಸೂರು ಆಸ್ಪತ್ರೆಗೆ ಹೋಗಲು ತಿಳಿಸಿದ್ದರಿಂದ ಅಲ್ಲಿಗೆ ತೆರಳಿದ್ದರು. ಮನೆಯಲ್ಲಿ ಯಾರೂ ಇಲ್ಲದಿರುವು ದನ್ನು ಖಚಿತಪಡಿಸಿಕೊಂಡ ಕಳ್ಳರು ಹೆಂಚು ಒಡೆದು ಕೆಳಗಿಳಿದಿದ್ದಾರೆ. ಬೀರುವಿನಲ್ಲಿಟ್ಟಿದ್ದ 3.50 ಲಕ್ಷ ರೂ. ನಗದು ಹಾಗು 49 ಗ್ರಾಂ ತೂಕದ 3.92 ಲಕ್ಷ ರೂ. ಬೆಲೆಯ ವಿವಿಧ ಚಿನ್ನಾಭರಣ ಕದ್ದಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸಿದ್ದೇಶ್ವರಸ್ವಾಮಿ ದರ್ಶನಕ್ಕೆ ಒತ್ತಾಯಿಸಿ ಪ್ರತಿಭಟನೆ



• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ದರ್ಶನ ಮತ್ತು ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಸಿದ್ದೇಶ್ವರ ದೇವಾಲಯದ ಬಾಗಿಲು ತೆರೆದು ಭಕ್ತರ ದರ್ಶನಕ್ಕೆ ಅವಕಾಶ ನೀಡುವಂತೆ ಒತ್ತಾಯಿಸಿ ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು ದೇವಸ್ಥಾನ ಮುಂಭಾಗ ಪ್ರತಿಭಟನೆ ನಡೆಸಿದರು.

ವಿಶ್ವಹಿಂದೂ ಪರಿಷತ್ ವಿಭಾಗೀಯ ಕಾರ್ಯದರ್ಶಿ ಮಹಿಪಾಲ್ ಮಾತನಾಡಿ, ಆಗಮಿಸುವ ಎಲ್ಲಾ ಭಕ್ತರಿಗೂ ಹಾಸನಾಂಬ ದೇವಿ ದರ್ಶನದ ಬಳಿಕ ಸಿದ್ದೇಶ್ವರ ಸ್ವಾಮಿಯ ದರ್ಶನಕ್ಕೆ ಅವಕಾಶ ಮಾಡಿಕೊಡಬೇಕು. ಸಿದ್ದೇಶ್ವರಸ್ವಾಮಿ ದರ್ಶನಕ್ಕೆ ಅವಕಾಶ ನೀಡಿದರೆ ಜನದಟ್ಟಣೆ ಹೆಚ್ಚಾಗುತ್ತದೆಂಬ ಕಾರಣ ನೀಡಿ ದರ್ಶನ ಸ್ಥಗಿತಗೊಳಿಸಿರುವುದು ಖಂಡನೀಯ ಎಂದು ಹೇಳಿದರು.

5 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಬ್ಯಾರಿಕೇಡ್ ಹಾಕಿ ಜನಸಂಖ್ಯೆ ನಿಯಂತ್ರಿಸುವವರು, ಸಿದ್ದೇಶ್ವರ ದೇವಾಲಯದ ಬಾಗಿಲು ತೆಗೆಯುವುದರಿಂದ ಜನ ಜಂಗುಳಿಯಾಗುತ್ತದೆಂಬ ಮಾತ ಸಮಂಜಸವಲ್ಲ. ಈ ಬಾರಿ ದೇವಸ್ಥಾನ ಆಡಳಿತ ಮಂಡಳಿ ಹೊರಗಿನ ಭಕ್ತರಿಗೆ ಉತ್ತಮ ವ್ಯವಸ್ಥೆ ಮಾಡಿದ್ದರೂ ಸ್ಥಳೀಯ ಭಕ್ತರಿಗೆ ದರ್ಶನದ ಅವಕಾಶ ಸಿಕ್ಕಿಲ್ಲ. ಪುರೋಹಿತ ವರ್ಗಕ್ಕೆ ಗೌರವ ನೀಡಬೇಕು, ಅಧಿಕಾರಿಗಳ ದರ್ಪದ ನಡವಳಿಕೆಯನ್ನು ಖಂಡಿಸುತ್ತೇವೆಂದು ಹೇಳಿದರು.

ದೇವಸ್ಥಾನದ ಆಡಳಿತಾಧಿಕಾರಿ ಮಾರುತಿ ಹಾಗು ಎಎಸ್ಪಿ ತಮ್ಮಯ್ಯ ಅವರು ದೇವಾಲಯದ ಕಾರ್ಯಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಅಧಿಕಾರಿಗಳು ಭಕ್ತರೊಂದಿಗೆ ಗೌರವದಿಂದ ನಡೆದುಕೊಳ್ಳಬೇಕು. ಎಎಸ್ಪಿ ತಮ್ಮಯ್ಯ ಅವರು ಬೂಟಿನಲ್ಲಿ ಹೊಡೆಯುತ್ತೇನೆಂಬ ಪದ ಬಳಕೆ ಮಾಡಿದ್ದಾರೆ. ದೇವಸ್ಥಾನದ ಆಡಳಿತಾಧಿಕಾರಿ ಅರ್ಚಕರಿಗೆ ಅಗೌರವ ತೋರುತ್ತಿದ್ದಾರೆಂದು ಆರೋಪಿಸಿದರು.

## ಆಸ್ಟ್ರೇಲಿಯಾ ವಿರುದ್ಧದ ಸರಣಿಗೆ ಟೀಂ ಇಂಡಿಯಾ ಕಠಿಣ ಅಭ್ಯಾಸ

• ಪ್ರಜೋದಯ ವರದಿ

**ಪರ್ತ್:** ಆಸ್ಟ್ರೇಲಿಯಾ ವಿರುದ್ಧ ಅ.19 ರಿಂದ ಆರಂಭವಾಗಲಿರುವ ಏಕದಿನ ಸರಣಿಗೂ ಮುನ್ನ ಭಾರತ ತಂಡ ಪರ್ತ್ ಮೈದಾನದಲ್ಲಿ ಕಠಿಣ ಅಭ್ಯಾಸ ನಡೆಸುತ್ತಿದೆ. ಅದರಲ್ಲೂ ವಿಶೇಷವಾಗಿ ಹಲವು ದಿನಗಳಿಂದ ಕ್ರಿಕೆಟ್‌ನಿಂದ ದೂರ ಉಳಿದಿರುವ ಹಿರಿಯ ಆಟಗಾರರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ನೆಟ್ಸ್‌ನಲ್ಲಿ ಕಠಿಣ ಅಭ್ಯಾಸ ನಡೆಸಿದ್ದಾರೆ.

ಫೆಬ್ರವರಿ-ಮಾರ್ಚ್‌ನಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿಯ ಸಂದರ್ಭದಲ್ಲಿ ಟೀಂ ಇಂಡಿಯಾ ಪರ ಕೊನೆಯದಾಗಿ ಆಡಿದ್ದ ಮಾಜಿ ನಾಯಕ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಮೇಲೆ ಎಲ್ಲರ ಕಣ್ಣು ನೆಟ್ಟಿದೆ.

ಭಾರತದ ಇಬ್ಬರು ಮಾಜಿ ನಾಯಕರು ನೆಟ್ಸ್‌ನಲ್ಲಿ ಸುಮಾರು 30 ನಿಮಿಷಗಳಿಗೂ ಹೆಚ್ಚು ಕಾಲ ಬ್ಯಾಟಿಂಗ್ ಅಭ್ಯಾಸ ನಡೆಸಿದ್ದಾರೆ. ಅ.19 ರಿಂದ ಪ್ರಾರಂಭವಾಗುವ 3 ಏಕದಿನ ಮತ್ತು 5 ಟಿ-20 ಪಂದ್ಯಗಳನ್ನು ಆಡಲು ಭಾರತ ತಂಡದ ಆಟಗಾರರು ಬುಧವಾರ ಮತ್ತು ಗುರುವಾರ 2 ಬ್ಯಾಚ್‌ಗಳಲ್ಲಿ ಆಸ್ಟ್ರೇಲಿಯಾಗೆ ಆಗಮಿಸಿದ್ದರು.

## ಸದೃಢ ಸಮಾಜಕ್ಕೆ ರೆಡ್‌ಕ್ರಾಸ್ ಕೊಡುಗೆ ಅನನ್ಯ

• ಪ್ರಜೋದಯ ವರದಿ

**ಹಾಸನ:** ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ನಿರಂತರವಾಗಿ ರಕ್ತದಾನ ಶಿಬಿರ ಆಯೋಜಿಸುವ ಮೂಲಕ ಸಮಾಜಕ್ಕೆ ಅತ್ಯಮೂಲ್ಯ ಕೊಡುಗೆ ಸಲ್ಲಿಸುತ್ತಿದೆ ಎಂದು ಸಂಸದ ಶ್ರೇಯಸ್ ಪಟೇಲ್ ಅವರು ಹೇಳಿದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಯುವ ರೆಡ್‌ಕ್ರಾಸ್ ಘಟಕ, ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಮತ್ತು ಐಎಸ್‌ಟಿಇ ವತಿಯಿಂದ ಸರ್ಕಾರಿ ಇಂಜಿನೀಯರಿಂಗ್ ಕಾಲೇಜಿನಲ್ಲಿ ಗುರುವಾರ ಏರ್ಪಡಿಸಿದ್ದ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿ, ಸ್ವಯಂ ಪ್ರೇರಿತ ರಕ್ತದಾನ ಶಿಬಿರಗಳನ್ನು ನಾಡಿನಲ್ಲಿ ನಿರಂತರವಾಗಿ ಆಯೋಜಿಸುತ್ತಾ, ರೋಗಿಗಳಿಗೆ ಸಂಜೀವಿನಿಯಂತೆ ಇರುವ ಸಂಸ್ಥೆ ಎಂದರೆ ಅದು ರೆಡ್‌ಕ್ರಾಸ್ ಎಂದು ಬಣ್ಣಿಸಿದರು.

ರಕ್ತಕ್ಕೆ ಪರ್ಯಾಯವಿಲ್ಲ. ಅಪಘಾತ, ಹೆರಿಗೆ, ಶಸ್ತ್ರ ಚಿಕಿತ್ಸೆ ಮುಂತಾದ ಸಂದರ್ಭಗಳಲ್ಲಿ ರಕ್ತದ ಅವಶ್ಯಕತೆ ಹೆಚ್ಚಿರುತ್ತದೆ. ಆರೋಗ್ಯವಂತರು ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದಾಗಿದೆ. ಒಬ್ಬರು ರಕ್ತದಾನ ಮಾಡುವುದರಿಂದ ಮೂರು ಜನರ ಪ್ರಾಣ ಉಳಿಸ ಬಹುದು. ಆದ್ದರಿಂದ ಯಾವ ಭಯವಿಲ್ಲದೆ ರಕ್ತದಾನ ಮಾಡಬೇಕೆಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.




ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಮೈಸೂರು ವಲಯ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಪ್ರಾಂಶುಪಾಲ ಡಾ.ಡಿ.ಪಿ.ಗಿರೀಶ್, ಜಿಲ್ಲಾ ರೆಡ್‌ಕ್ರಾಸ್ ಸಭಾಪತಿ ಹೆಚ್.ಪಿ. ಮೋಹನ್, ಕಾರ್ಯದರ್ಶಿ ಶಬ್ಬೀರ್ ಅಹಮದ್, ಖಜಾಂಚಿ ಹೆಚ್.ಡಿ. ಜಯೇಂದ್ರ ಕುಮಾರ್, ನಿರ್ದೇಶಕರಾದ ಎಸ್.ಎಸ್.ಪಾಷಾ, ಸುಬ್ಬಸ್ವಾಮಿ, ಸುರೇಶ್, ಯುವ ರೆಡ್‌ಕ್ರಾಸ್ ಘಟಕದ ಕಾರ್ಯಕ್ರಮ ಸಂಯೋಜಕ ಡಾ.ಎಲ್.ತಿಮ್ಮೇಶ್, ಐಎಸ್‌ಟಿಇ ಘಟಕದ ಕಾರ್ಯಕ್ರಮ ಸಂಯೋಜಕ ಡಾ.ತೀರ್ಥೇಗೌಡ ಉಪಸ್ಥಿತರಿದ್ದರು.

## ಇದು ಭಾರತೀಯ ಶತಮಾನ : 2047ರಲ್ಲಿ ವಿಕಸಿತ ಭಾರತ

• ಪ್ರಜೋದಯ ವರದಿ

**ಕರ್ನೂಲ್:** ಆಂಧ್ರಪ್ರದೇಶಕ್ಕೆ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರು 13,430 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದ್ದಾರೆ.

ನಗರದಲ್ಲಿ ನಡೆದ ಸಮಾರಂಭದಲ್ಲಿ ಮೋದಿ ಅವರು ಕೈಗಾರಿಕೆ, ವಿದ್ಯುತ್ ಪ್ರಸರಣ, ರಸ್ತೆ, ರೈಲ್ವೆ, ರಕ್ಷಣಾ ಉತ್ಪಾದನೆ, ಪೆಟ್ರೋಲಿಯಂ, ನೈಸರ್ಗಿಕ ಅನಿಲದಂತಹ ಪ್ರಮುಖ ಯೋಜನೆಗಳ ಲೋಕಾರ್ಪಣೆ ಮತ್ತು ಶಂಕುಸ್ಥಾಪನೆ ನೆರವೇರಿಸಿದ್ದಾರೆ.

ಕರ್ನೂಲ್-ಪೂಲಿಂಗ್ ಸ್ಟೇಷನ್‌ನಲ್ಲಿ 2,880 ಕೋಟಿ ಗೂ ಹೆಚ್ಚು ವೆಚ್ಚ ದಲ್ಲಿ ಪ್ರಸರಣ ವ್ಯವಸ್ಥೆಯನ್ನು ಬಲ ಪಡಿಸುವ ಕಾಮಗಾರಿ ಮತ್ತು ಕರ್ನೂಲ್‌ನ ಓರ್ವಕಲ್ ಕೈಗಾರಿಕಾ ಪ್ರದೇಶ ಮತ್ತು ಕಡಪಾದಲ್ಲಿನ ಕೊಪ್ಪರ್ತಿ ಕೈಗಾರಿಕಾ ಪ್ರದೇಶದಲ್ಲಿ 4,920 ಕೋಟಿಗೂ ಅಧಿಕ ಮೊತ್ತದ ಯೋಜನೆಗಳಿಗೆ ಮೋದಿ ಅಡಿಪಾಯ ಹಾಕಿದ್ದಾರೆ.



ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಮತ್ತು ಅನುಷ್ಠಾನ ಟ್ರಸ್ಟ್ ಹಾಗೂ ಆಂಧ್ರ ಪ್ರದೇಶ ಕೈಗಾರಿಕಾ ಮೂಲಸೌಕರ್ಯ ನಿಗಮ ಲಿಮಿಟೆಡ್ ಜಂಟಿಯಾಗಿ ಅಭಿವೃದ್ಧಿಪಡಿಸಿದ ಈ ಯೋಜನೆಗಳು ಪ್ಲಗ್ ಅಂಡ್ ಪ್ಲೇ ಮೂಲಸೌಕರ್ಯ ಮತ್ತು ವಾಕ್ ಟು ವರ್ಕ್ ಪರಿಕಲ್ಪನೆ ಯನ್ನು ಹೊಂದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಯೋಜನೆಗಳು 21,000 ಕೋಟಿ ಹೂಡಿಕೆ ಆಕರ್ಷಿಸುವುದರ ಜೊತೆಗೆ 1 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ. ಇದು ರಾಜ್ಯದ ರಾಯಲಸೀಮಾ ಪ್ರದೇಶ ದಲ್ಲಿ ಕೈಗಾರಿಕಾ ಅಭಿವೃದ್ಧಿ ಹೆಚ್ಚಿಸುತ್ತ ದೆಂದು ಹೇಳಿದ್ದಾರೆ.

ಈ ವೇಳೆ 960 ಕೋಟಿಗೂ ಹೆಚ್ಚು ವೆಚ್ಚದಲ್ಲಿ ಸಬ್ಬಾವರಂನಿಂದ ಶೀಲಾನಗರದವರೆಗಿನ ಆರು ಪಥಗಳ ಹೆದ್ದಾರಿಗೆ ಮೋದಿ ಶಂಕುಸ್ಥಾಪನೆ ನೆರವೇರಿಸಿದ್ದಾರೆ. ಈ ಯೋಜನೆಯು ಬಂದರು ನಗರಿ ವಿಶಾಖಪಟ್ಟಣದಲ್ಲಿ ದಟ್ಟಣೆಯನ್ನು ಕಡಿಮೆ ಮಾಡುವುದರ ಜೊತೆಗೆ ವ್ಯಾಪಾರ ಮತ್ತು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಉದ್ದೇಶ ಹೊಂದಿದೆ. ಪಿಲೇರು-ಕಲೂರು ನಡುವೆ ಚತುಷ್ಪಥ ರಸ್ತೆ, ಕಡಪ-ನೆಲ್ಲೂರು ಗಡಿಯಿಂದ ಸಿ.ಎಸ್. ಪುರಂವರೆಗೆ ರಸ್ತೆ ಅಗಲೀಕರಣ ಮತ್ತು ರಾಷ್ಟ್ರೀಯ ಹೆದ್ದಾರಿ 165ರಲ್ಲಿ ಗುಡಿವಾಡ ಮತ್ತು ನುಜೆಲ್ಲಾ ರೈಲು ನಿಲ್ದಾಣಗಳ ನಡುವಿನ ಚತುಷ್ಪಥ ರೈಲು ಸೇತುವೆಯನ್ನು (ಆರ್‌ಒಬಿ) ಪ್ರಧಾನಿ ಉದ್ಘಾಟಿಸಿದ್ದಾರೆ.

# ದಿಗ್ಗಜರ ದಾಖಲೆ ಮುರಿಯಲು ಸಜ್ಜಾದ ವಿರಾಟ್

• ಪ್ರಜೋದಯ ವರದಿ

**ಬೆಂಗಳೂರು:** ಭಾರತ ಕ್ರಿಕೆಟ್ ತಂಡದ ಸೂಪರ್ ಸ್ಟಾರ್ ವಿರಾಟ್ ಕೊಹ್ಲಿ ಅವರು ಬರೋಬ್ಬರಿ ಏಳು ತಿಂಗಳ ಬಳಿಕ ಟೀಂ ಇಂಡಿಯಾ ಜೆರ್ಸಿಯಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಇದೇ ವರ್ಷ ಫೆಬ್ರುವರಿ ಹಾಗೂ ಮಾರ್ಚ್‌ನಲ್ಲಿ ನಡೆದ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಆಡಿದ್ದ ಕೊಹ್ಲಿ, ಆ ಬಳಿಕ ನಿಗದಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಕಾಣಿಸಿಕೊಂಡಿರಲಿಲ್ಲ. ಟೂರ್ನಿಯ 5 ಇನಿಂಗ್ಸ್‌ಗಳಲ್ಲಿ ಬ್ಯಾಟ್ ಬೀಸಿದ್ದ ಅವರು, 54.50ರ ಸರಾಸರಿಯಲ್ಲಿ 218 ರನ್ ಕಲೆಹಾಕುವ ಮೂಲಕ ಟೀಂ ಇಂಡಿಯಾ ಚಾಂಪಿಯನ್ ಪಟ್ಟಕ್ಕೇರಲು ನೆರವಾಗಿದ್ದರು.

ಟಿ-20 ಮತ್ತು ಟೆಸ್ಟ್ ಮಾದರಿಗೆ ಈಗಾಗಲೇ ವಿದಾಯ ಹೇಳಿರುವ ಕಿಂಗ್ ಅ.18ರಂದು ಆಸ್ಟ್ರೇಲಿಯಾ ಎದುರು ಆರಂಭವಾಗಲಿರುವ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಕಣಕ್ಕಿಳಿಯಲಿ ದ್ದಾರೆ. ದಕ್ಷಿಣ ಆಫ್ರಿಕಾ ಆತಿಥ್ಯದಲ್ಲಿ 2027ರಲ್ಲಿ ನಡೆಯುವ ಏಕದಿನ ವಿಶ್ವಕಪ್‌ನಲ್ಲಿ ಟೀಂ ಇಂಡಿಯಾದಲ್ಲಿ ಸ್ಥಾನ ಪಡೆಯುವ ನಿಟ್ಟಿನಲ್ಲಿ ಆಸಿಸ್ ಸರಣಿಯು ವಿರಾಟ್ ಪಾಲಿಗೆ ನಿರ್ಣಾಯಕವಾಗುವ ಸಾಧ್ಯತೆ ಇದೆ. ಅಷ್ಟೇ ಅಲ್ಲ, ಮೂರು ಪಂದ್ಯಗಳ ಸರಣಿಯಲ್ಲಿ ಕೆಲವು ಅದ್ವಿತೀಯ ದಾಖಲೆಗಳನ್ನು ನಿರ್ಮಿಸುವ ಅವಕಾಶವೂ ವಿರಾಟ್‌ಗಿದೆ.



**ಏಕದಿನದ ಕ್ರಿಕೆಟ್‌ನಲ್ಲಿ ಗರಿಷ್ಠ ರನ್, 2ನೇ ಸ್ಥಾನಕ್ಕೇರುವ ಅವಕಾಶ**

ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ಅತಿಹೆಚ್ಚು ರನ್ ಕಲೆಹಾಕಿದ ಬ್ಯಾಟರ್‌ಗಳ ಸಾಲಿನಲ್ಲಿ ಬ್ಯಾಟಿಂಗ್ ದಿಗ್ಗಜ ಸಚಿನ್ ತೆಂಡೂಲ್ಕರ್ ಹಾಗೂ ಶ್ರೀಲಂಕಾದ ಕುಮಾರ ಸಂಗಕ್ಕಾರ ಮೊದಲೆರಡು ಸ್ಥಾನಗಳಲ್ಲಿದ್ದಾರೆ. ಸಚಿನ್ 18,426 ರನ್ ಗಳಿಸಿದ್ದರೆ, ಸಂಗಕ್ಕಾರ 14,234 ರನ್ ಕಲೆಹಾಕಿದ್ದಾರೆ. ವಿರಾಟ್ ಖಾತೆಯಲ್ಲಿ 14,181 ರನ್‌ಗಳಿವೆ. ಸಂಗಕ್ಕಾರ ಅವರನ್ನು ಹಿಂದಿಕ್ಕಿ 2ನೇ ಸ್ಥಾನಕ್ಕೇರಲು ಅವರಿಗೆ ಕೇವಲ 54 ರನ್ ಬೇಕಿದೆ.

**ಎಲ್ಲಾ ಒಂದು ಮಾದರಿಯಲ್ಲಿ ಅತಿಹೆಚ್ಚು ಶತಕ**

ಪ್ರಸ್ತುತ ಏಕದಿನ ಕ್ರಿಕೆಟ್‌ನಲ್ಲಿ 51 ಶತಕಗಳನ್ನು ಬಾರಿಸಿರುವ ವಿರಾಟ್, ಈ ಮಾದರಿಯಲ್ಲಿ ಶತಕಗಳ ಅರ್ಧಶತಕ ಸಿಡಿಸಿದ ಏಕೈಕ ಆಟಗಾರ ಎನಿಸಿದ್ದಾರೆ. ಆದಾಗ್ಯೂ ಯಾವುದೇ ಒಂದು ಮಾದರಿಯಲ್ಲಿ ಗರಿಷ್ಠ ಶತಕ ಗಳಿಸಿದ ಬ್ಯಾಟರ್ ಎನಿಸಿಕೊಳ್ಳಲು ಅವರಿಗೆ ಇನ್ನೊಂದು ನೂರು ಬೇಕಾಗಿದೆ. ಟೆಸ್ಟ್ ಮಾದರಿಯಲ್ಲಿ ಸಚಿನ್ 51 ಶತಕ ಗಳಿಸಿದ್ದಾರೆ.

**ವೇಗವಾಗಿ 28,000 ರನ್**

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ವೇಗವಾಗಿ 28,000 ರನ್ ಕೆಲಹಾಕಿದ ಬ್ಯಾಟರ್ ಎನಿಸಿಕೊಳ್ಳಲು ಕೊಹ್ಲಿ ಇನ್ನು 401 ರನ್ ಬೇಕಿದೆ. ಮುಂದಿನ 26 ಇನಿಂಗ್ಸ್‌ಗಳಲ್ಲಿ ಇಷ್ಟು ರನ್ ಗಳಿಸಿದರೂ ಕೊಹ್ಲಿ 28 ಸಹಸ್ರ ರನ್ ಕಲೆಹಾಕಿದ ಆಟಗಾರ ಎನಿಸಿಕೊಳ್ಳಲಿದ್ದಾರೆ. ಹಾಗೆಯೇ,418 ರನ್ ಗಳಿಸಿದರೆ, ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಹೆಚ್ಚು ರನ್ ಗಳಿಸಿದ ಆಟಗಾರರ ಪಟ್ಟಿಯಲ್ಲಿ 2ನೇ ಸ್ಥಾನಕ್ಕೇರಲಿದ್ದಾರೆ. ಈವರೆಗೆ 617 ಇನಿಂಗ್ಸ್‌ಗಳಲ್ಲಿ ಆಡಿರುವ ಕೊಹ್ಲಿ ಖಾತೆಯಲ್ಲಿ ಸದ್ಯ 27,599 ರನ್‌ಗಳಿವೆ. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಗರಿಷ್ಠ ರನ್‌ಗಳಿಸಿರುವ ಪಟ್ಟಿಯಲ್ಲೂ ಸಚಿನ್ ಹಾಗೂ ಸಂಗಕ್ಕಾರ ಮೊದಲೆರಡು ಸ್ಥಾನಗಳಲ್ಲಿದ್ದಾರೆ. ಸಚಿನ್ 782 ಇನಿಂಗ್ಸ್‌ಗಳಲ್ಲಿ 34,357 ರನ್ ಗಳಿಸಿದ್ದರೆ, ಸಂಗಕ್ಕಾರ 666 ಇನಿಂಗ್ಸ್‌ಗಳಲ್ಲಿ 28,016 ರನ್ ಬಾರಿಸಿದ್ದಾರೆ.

**ಚೇಸಿಂಗ್ ವೇಳೆ 6,000 ರನ್**

ಏಕದಿನ ಮಾದರಿಯಲ್ಲಿ ಗುರಿ ಬೆನ್ನಟ್ಟುವ ವೇಳೆ 6,000 ರನ್ ಕಲೆಹಾಕಿದ ಸಾಧನೆ ಮಾಡಲು ಕೇವಲ 2 ರನ್ ಬೇಕಾಗಿದೆ. ಅದೇ ರೀತಿ, ಕಾಂಗರೂ ನೆಲದಲ್ಲಿ ಇನ್ನೊಂದು ಶತಕ ಸಿಡಿಸಿದರೆ, ವಿದೇಶ ಪಿಚ್‌ಗಳಲ್ಲಿ 30 ಸಲ ಮೂರಂಕಿ ಗಡಿ ದಾಟಿಸಿದ ಸಾಧನೆಯನ್ನೂ ಮಾಡಲಿದ್ದಾರೆ.

**ಸಚಿನ್ ಹಿಂದಿಕ್ಕಲು ಬೇಕು 67 ರನ್**

ನಿಗದಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಅತಿಹೆಚ್ಚು ರನ್ ಕಲೆಹಾಕಿದ ಬ್ಯಾಟರ್ ಎನಿಸಿಕೊಳ್ಳಲು ಕೊಹ್ಲಿಗೆ ಇನ್ನು ಕೇವಲ 67 ರನ್ ಬೇಕಾಗಿದೆ. ಏಕದಿನ ಹಾಗೂ ಟಿ-20 ಮಾದರಿಯಲ್ಲಿ ಆಡಿರುವ 427 ಪಂದ್ಯಗಳ 407 ಇನಿಂಗ್ಸ್‌ಗಳಿಂದ 18,369 ರನ್ ಕಲೆಹಾಕಿದ್ದಾರೆ. ಸದ್ಯ ಅಗ್ರಸ್ಥಾನದಲ್ಲಿರುವ ಸಚಿನ್, 464 ಪಂದ್ಯಗಳ 453 ಇನಿಂಗ್ಸ್‌ಗಳಿಂದ 18,436 ರನ್ ಗಳಿಸಿದ್ದಾರೆ. ಸಚಿನ್ ಒಂದೇ ಒಂದು ಟಿ-20 ಪಂದ್ಯದಲ್ಲಿ ಕಣಕ್ಕಿಳಿದು 10 ರನ್ ಗಳಿಸಿದ್ದಾರೆ. ಉಳಿದೆಲ್ಲವೂ ಏಕದಿನ ಮಾದರಿಯಲ್ಲಿ ಗಳಿಸಿದ ರನ್‌ಗಳಾಗಿವೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019